7	ಎ.ಹೆಚ್. ಸವಣೂರ್, ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಕಾರವಾರ	07-12-1950	31-12-2010
8	ಕೆ.ಎಸ್. ನಾಯಕ್, ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಳಗಾವಿ	01-01-1951	31-12-2010

ಈ ಅಧಿಸೂಚನೆಯನ್ವಯ ನಿವೃತ್ತಿ ಹೊಂದಲಿರುವ ಅಧಿಕಾರಿಗಳಿಂದ ಸರ್ಕಾರಕ್ಕೆ ಬರಬೇಕಾದ ಯಾವುದೇ ಬಾಕಿಯನ್ನು ಅವರ ನಿವೃತ್ತಿ ಉಪದಾನದಲ್ಲಿ ಮುರಿದುಕೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ **(ಪೊಲೀಸ್ ಸೇವೆಗಳು)**

ಪಿ.ಆರ್. 584

ಅಧಿಸೂಚನೆ

ಸಂಖ್ಯೆ: ಒಇ 153 ಪೊಸಿಪ 2010, ಬೆಂಗಳೂರು, ದಿನಾಂಕ: 17ನೇ ಏಪ್ರಿಲ್ 2010.

ಸರ್ಕಾರದ ಆದೇಶ ಸಂಖ್ಯೆ : ಒಇ 64 ಪೊಸಿಪ 2010, ದಿನಾಂಕ 25-03-2010ರ ಆದೇಶದ ಭಾಗದಲ್ಲಿ **"ಹೊಸದಾಗಿ ಸೃಜಿಸಿದ ಹುದ್ದೆಗೆ"** ಎಂಬುದರ ಬದಲಾಗಿ **"ಸರ್ಕಾರದ ಆದೇಶ ಸಂಖ್ಯೆ ಹೆಚ್‌ಡಿ 33 ಪಿ.ಓ.ಪಿ 2010 ದಿನಾಂಕ 11-03-2010ರನ್ವಯ ಪೊಲೀಸ್ ಅಧೀಕ್ಷಕರು, ಸ್ಪೆಷಲ್ ಟಾಸ್ಕ್ ಫೋರ್ಸ್, ಬೆಂಗಳೂರಿನಲ್ಲಿದ್ದ ಎರಡು ಹುದ್ದೆಗಳಲ್ಲಿ ಒಂದು ಪೊಲೀಸ್ ಅಧೀಕ್ಷಕರ ಹುದ್ದೆಯನ್ನು ಉಪ ಪೊಲೀಸ್ ಆಯುಕ್ತರು (ಕಾನೂನು ಮತ್ತು ಸುವ್ಯವಸ್ಥೆ) ಎಂದು ಮರು ಪದನಾಮಿಕರಿಸಿ ಪೊಲೀಸ್ ಕಮೀಷನರೇಟ್, ಮಂಗಳೂರು ನಗರಕ್ಕೆ ಸ್ಥಳಾಂತರಿಸಲಾದ ಹುದ್ದೆಗೆ"** ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 585

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 223 ಐಡಿಎಂ 2010, ಬೆಂಗಳೂರು, ದಿನಾಂಕ: 15ನೇ ಏಪ್ರಿಲ್ 2010.

1ನೇ ಅಪರ ಕಾರ್ಮಿಕ ನ್ಯಾಯಾಲಯ, ಬೆಂಗಳೂರು ಇಲ್ಲಿ ಅಧ್ಯಕ್ಷಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಎ.ಹೆಚ್. ಅದೆಪ್ಪಣ್ಣನವರ ಇವರು ದಿನಾಂಕ : 28-02-2010ರಂದು ನಿವೃತ್ತಿಯಿಂದಾಗಿ ತೆರವಾದ ಹುದ್ದೆಗೆ 2ನೇ ಅಪರ ಕಾರ್ಮಿಕ ನ್ಯಾಯಾಲಯ, ಬೆಂಗಳೂರು ಇಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಕ್ಷಾಧಿಕಾರಿಗಳು, ಇವರನ್ನು ದಿನಾಂಕ : 01-03-2010ರಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸಮವರ್ತಿ ಪ್ರಭಾರದಲ್ಲಿರಿಸಿ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಗೋವಿಂದಸ್ವಾಮಿ
ಪೀಠಾಧಿಕಾರಿ-5, ಕಾರ್ಮಿಕ ಇಲಾಖೆ
(ಕಾರಾವಿಯೋ (ವೈ) ಸೇವೆಗಳು)

ಪಿ.ಆರ್. 586

HIGH COURT OF KARNATAKA

NOTIFICATION

No.GOB (I) 18/2010, Bangalore, Dated 21st April, 2010

PART-I

In exercise of the powers conferred by Clauses (a) and (b) of Sub-Section (3) of Section 28 of the Karnataka Civil Courts Act, 1964 (Karnataka Act No.21/1964), the High Court of Karnataka hereby designates the District Judges/ Civil Judges mentioned in Column No.2 of the table below, as the Vacation Judges, for the duration of adjournment of District Courts mentioned in Column No.3 for the period of Summer Vacation of 2010, noted in Column No.4

TABLE

Sl. No.	Designation	District Court	Periods	
			From	To
1	2	3	4	
1.	II Addl. District and Sessions Judge, Bangalore Rural District, Bangalore.	Bangalore Rural	26-4-2010	2-5-2010

2.	Prl. Senior Civil Judge, Bangalore Rural District, Bangalore.	Bangalore Rural	3-5-2010	9-5-2010
3.	II Addl. Senior Civil Judge, Bangalore Rural District, Bangalore.	Bangalore Rural	10-5-2010	23-5-2010
4.	Prl. Senior Civil Judge and CJM, Bagalkot.	Bagalkot	26-4-2010	2-5-2010
5.	I Addl. Senior Civil Judge and JMFC, Bagalkot.	Bagalkot	03-5-2010	09-5-2010
6.	II Addl. Senior Civil Judge and JMFC, Bagalkot.	Bagalkot	10-5-2010	23-5-2010
7.	Prl. District and Sessions Judge, Belgaum.	Belgaum	26-4-2010	28-4-2010
8.	III Addl. District and Sessions Judge, Belgaum.	Belgaum	29-4-2010	30-4-2010
9.	IV Addl. District and Sessions Judge, Belgaum.	Belgaum	1-5-2010	7-5-2010
10.	I Addl. Senior Civil Judge and CJM, Belgaum.	Belgaum	8-5-2010	9-5-2010
11.	I Addl. District and Sessions Judge, Belgaum.	Belgaum	10-5-2010	15-5-2010
12.	II Addl. District and Sessions Judge, Belgaum.	Belgaum	16-5-2010	23-5-2010
13.	I Addl. District and Sessions Judge, Bellary.	Bellary	26-4-2010	09-5-2010
14.	Prl. Senior Civil Judge and CJM, Bellary.	Bellary	10-5-2010	16-5-2010
15.	Presiding Officer, Fast Track Court-I, Bellary	Bellary	17-5-2010	23-5-2010
16.	Addl. District and Sessions Judge, Bidar.	Bidar	26-4-2010	06-5-2010
17.	Prl. Senior Civil Judge and CJM, Bidar.	Bidar	07-5-2010	09-5-2010
18.	Addl. Senior Civil Judge, Bidar.	Bidar	10-5-2010	23-5-2010
19.	Prl. District & Sessions Judge, Bijapur.	Bijapur	26-4-2010	01-5-2010
20.	Prl. Senior Civil Judge and CJM, Bijapur.	Bijapur	2-5-2010	09-5-2010

21.	I Addl. District and Sessions Judge, Bijapur.	Bijapur	10-5-2010	23-5-2010
22.	Senior Civil Judge and JMFC, Kollegal.	Chamarajanagar	26-4-2010	09-5-2010
23.	Presiding Officer, Fast Track Court, Kollegal.	Chamarajanagar	10-5-2010	23-5-2010
24.	District and Sessions Judge, Chickballapur.	Chickballapur	26-4-2010	30-4-2010
25.	Presiding Officer, Fast Track Court, Chickballapur.	Chickballapur	01-5-2010	09-5-2010
26.	Senior Civil Judge and CJM., Chickballapur.	Chickballapur	10-5-2010	19-5-2010
27.	Senior Civil Judge and JMFC, Chintamani.	Chickballapur	20-5-2010	23-5-2010
28.	Senior Civil Judge and CJM., Chikmagalur.	Chikmagalur	26-4-2010	09-5-2010
29.	Senior Civil Judge and JMFC, Chikmagalur.	Chikmagalur	10-5-2010	16-5-2010
30.	Addl. District and Sessions Judge (Concurrent Charge), Chikmagalur.	Chikmagalur	17-5-2010	23-5-2010
31.	Presiding Officer, Fast Track Court, Chitradurga.	Chitradurga	26-4-2010	30-4-2010
32.	Addl. District and Sessions Judge, Chitradurga.	Chitradurga	01-5-2010	09-5-2010
33.	Prl. Senior Civil Judge and CJM, Chitradurga.	Chitradurga	10-5-2010	23-5-2010
34.	Prl. Senior Civil Judge and CJM, Davanagere.	Davanagere	26-4-2010	02-5-2010
			17-5-2010	23-5-2010
35.	I Addl. Senior Civil Judge, Davanagere.	Davanagere	03-5-2010	09-5-2010
36.	II Addl. Senior Civil Judge, Davanagere.	Davanagere	10-5-2010	11-5-2010
37.	III Addl. Senior Civil Judge, Davanagere.	Davanagere	12-5-2010	16-5-2010
38.	II Addl. District and Sessions Judge, Dharwad.	Dharwad.	26-4-2010	02-5-2010

39.	Prl. Senior Civil Judge and CJM, Dharwad.	Dharwad.	03-5-2010	09-5-2010
40.	Prl. Senior Civil Judge, Hubli.	Dharwad.	10-5-2010	16-5-2010
41.	I Addl. District and Sessions Judge, Dharwad sitting at Hubli.	Dharwad.	17-5-2010	23-5-2010
42.	I Addl. District and Sessions Judge, D.K. Mangalore	D.K. Mangalore	26-4-2010	09-5-2010
43.	III Addl. District and Sessions Judge, D.K. Mangalore	D.K. Mangalore	10-5-2010	23-5-2010
44.	District and Sessions Judge, Gadag.	Gadag	26-4-2010	09-5-2010
45.	Presiding Officer, Fast Track Court, Gadag.	Gadag	10-5-2010	23-5-2010
46.	III Addl. District and Sessions Judge, Gulbarga.	Gulbarga	26-4-2010	02-5-2010
47.	IV Addl. District and Sessions Judge, Gulbarga.	Gulbarga	03-5-2010	09-5-2010
48.	I Addl. District and Sessions Judge, Gulbarga.	Gulbarga	10-5-2010	16-5-2010
49.	II Addl. District and Sessions Judge, Gulbarga.	Gulbarga	17-5-2010	23-5-2010
50.	Prl. Senior Civil Judge and CJM, Hassan.	Hassan	26-4-2010	01-5-2010
51.	Addl. Senior Civil Judge, Hassan.	Hassan	02-5-2010	09-5-2010
52.	Addl. District and Sessions Judge,, Hassan.	Hassan	10-5-2010	16-5-2010
53.	Presiding Officer, Fast Track Court, Hassan.	Hassan	17-5-2010	23-5-2010
54.	Senior Civil Judge and CJM., Haveri.	Haveri.	26-4-2010	09-5-2010
55.	Addl. Senior Civil Judge and JMFC, Haveri.	Haveri.	10-5-2010	23-5-2010
56.	Senior Civil Judge & CJM., Madikeri.	Kodagu Madikeri	26-4-2010	09-5-2010
57.	Presiding Officer, Fast Track Court, Kodagu Madikeri	Kodagu Madikeri	10-5-2010	23-5-2010
58.	Prl. Senior Civil Judge and CJM, Kolar.	Kolar	26-4-2010	05-5-2010
59.	II Addl. Senior Civil Judge and JMFC, Kolar.	Kolar	06-5-2010	09-5-2010

60.	I Addl. Senior Civil Judge & CJM., Kolar.	Kolar	10-5-2010	19-5-2010
61.	II Addl. District and Sessions Judge, Kolar.	Kolar	20-5-2010	23-5-2010
62.	Presiding Officer, Fast Track Court-I, Koppal.	Koppal	26-4-2010	09-5-2010
63.	Presiding Officer, Fast Track Court-II, Koppal.	Koppal	10-5-2010	23-5-2010
64.	Addl. Senior Civil Judge and CJM, Mandya.	Mandya	26-4-2010	09-5-2010
65.	Prl. Senior Civil Judge and CJM, Mandya.	Mandya	10-5-2010	14-5-2010
			18-5-2010	23-5-2010
66.	Prl. Senior Civil Judge and JMFC, Srirangapatna.	Mandya	15-5-2010	17-5-2010
67.	II Addl. District and Sessions Judge, Mysore.	Mysore	26-4-2010	02-5-2010
68.	III Addl. District and Sessions Judge, Mysore.	Mysore	03-5-2010	09-5-2010
69.	IV Addl. Senior Civil Judge and JMFC, Mysore	Mysore	10-5-2010	16-5-2010
70.	III Addl. Senior Civil Judge and CJM, Mysore.	Mysore	17-5-2010	23-5-2010
71.	Addl. District and Sessions Judge, Raichur.	Raichur	26-4-2010	29-4-2010
72.	Addl. Senior Civil Judge, Raichur.	Raichur	30-4-2010	09-5-2010
73.	Prl. Senior Civil Judge and CJM, Raichur	Raichur	10-5-2010	16-5-2010
74.	Presiding Officer, Fast Track Court-I, Raichur	Raichur	17-5-2010	23-5-2010
75.	Presiding Officer, Fast Track Court, Ramanagara.	Ramanagara	26-4-2010	02-5-2010
76.	Addl. Senior Civil Judge, Ramanagara.	Ramanagara	03-5-2010	09-5-2010
77.	Prl. Senior Civil Judge and CJM, Ramanagara.	Ramanagara	10-5-2010	23-5-2010
78.	Addl. District and Sessions Judge, Shimoga.	Shimoga	26-4-2010	09-5-2010

79.	Addl. Senior Civil Judge and JMFC, Shimoga.	Shimoga	10-5-2010	14-5-2010
80.	Prl. Senior Civil Judge and CJM, Shimoga.	Shimoga	15-5-2010	16-5-2010
81.	Presiding Officer, Fast Track Court-III, Shimoga.	Shimoga	17-5-2010	23-5-2010
82.	II Addl. District and Sessions Judge, Tumkur.	Tumkur	26-4-2010	01-5-2010
83.	III Addl. District and Sessions Judge, Tumkur.	Tumkur	02-5-2010	09-5-2010
84.	Presiding Officer, Fast Track Court-III, Tumkur.	Tumkur	10-5-2010	16-5-2010
85.	Presiding Officer, Fast Track Court-IV, Tumkur.	Tumkur	17-5-2010	23-5-2010
86.	Presiding Officer, Fast Track Court, Udupi.	Udupi	26-4-2010	09-5-2010
87.	Prl. Senior Civil Judge and CJM, Udupi.	Udupi	10-5-2010	23-5-2010
88.	Prl. Senior Civil Judge and CJM, U.K., Karwar.	U.K. Karwar	26-4-2010	09-5-2010
89.	Addl. Senior Civil Judge, Karwar.	U.K. Karwar	10-5-2010	23-5-2010
90.	Senior Civil Judge and CJM, Yadgir.	Yadgir	26-4-2010	09-5-2010
91.	Senior Civil Judge, Shorapur.	Yadgir	10-5-2010	23-5-2010

PART- II

In exercise of the powers conferred under Sub-Section (3) of Section 28 of the Karnataka Civil Courts Act, 1964, the Vacation Judges are directed to dispose of urgent civil matters in which injuction, stay of proceedings and attachment orders etc., are sought for during the Summer Vacation of 2010.

PART- III

In exercise of the powers conferred under Sub-Section (5) of Section 28 of the Karnataka Civil Courts Act, 1964, the Vacation Judges are directed to exercise the same administrative control over the staff of the Civil Courts that are being exercised by the Prl. District and Sessions Judges, during the period of Summer Vacation of 2010, in the absence of Prl. District and Sessions Judges.

PART- IV

Wherever the Civil Judges (Sr.Dn) mentioned in column No.2 are designated as Vacation Civil Judges, the District Judges are directed to issue a Notification as required under Sub-Section (3) of Section 10 of the Criminal Procedure Code making provisions for the disposal of any urgent application appointing such officers.

By Order of the High Court,
P. KRISHNA BHAT
REGISTRAR (JUDICIAL)

PR. 587

NOTIFICATION

No.GOB (I) 18/2010, Bangalore, Dated 21st April, 2010

In exercise of the powers conferred by Clause (a) of Sub-Rule (3) of Rule 6 of the Family Courts (Procedure) Rules, 1987 the High Court of Karnataka hereby designates the Officers mentioned in column (2) as Vacation Judges of the Family Courts mentioned in column No,(3) for hearing of all matters which required to be immediately and promptly dealt with during the Summer Vacation of 2010 for the periods noted against them in Column No.4.

TABLE

Sl. No.	Designation	Family Court	Periods	
			From	To
1	2	3	4	
1.	III Addl. Prl. Judge, Family Court, Bangalore.	Bangalore	26-4-2010	9-5-2010
2.	II Addl. Prl. Judge, Family Court, Bangalore.	Bangalore	10-5-2010	16-5-2010
3.	Prl. Judge, Family Court, Bangalore.	Bangalore	17-5-2010	23-5-2010
4.	Prl. District and Sessions Judge, Belgaum.	Belgaum	26-4-2010	28-4-2010
5.	III Addl. District and Sessions Judge, Belgaum.	Belgaum	29-4-2010	30-4-2010
6.	IV Addl. District and Sessions Judge, Belgaum.	Belgaum	1-5-2010	7-5-2010
7.	I Addl. Senior Civil Judge, and CJM, Belgaum.	Belgaum	8-5-2010	9-5-2010
8.	I Addl. District and Sessions Judge, Belgaum.	Belgaum	10-5-2010	15-5-2010
9.	II Addl. District and Sessions Judge, Belgaum.	Belgaum	16-5-2010	23-5-2010
10.	Prl. District and Sessions Judge, Bijapur.	Bijapur	26-4-2010	01-5-2010

11.	Prl. Senior Civil Judge and CJM, Bijapur.	Bijapur	2-5-2010	09-5-2010
12.	I Addl. District and Sessions Judge, Bijapur.	Bijapur	10-5-2010	23-5-2010
13.	Judge, Family Court, Davanagere.	Davanagere	26-4-2010	09-5-2010
14.	II Addl. Senior Civil Judge, Davanagere.	Davanagere	10-5-2010	11-5-2010
15.	III Addl. Senior Civil Judge, Davanagere	Davanagere	12-5-2010	16-5-2010
16.	Prl. Senior Civil Judge, Davanagere	Davanagere	17-5.-2010	23--5-2010
17.	III Addl. District and Sessions Judge, Gulbarga.	Gulburga	26.4.2010	09-5-2010
18.	Judge, Family Court, Gulburga	Gulburga	10-5--2010	23-5-2010
19.	Addl. District and Sessions Judge, Raichur.	Raichur	26-4-2010	29-4-2010
20.	Addl. Senior Civil Judge, Raichur.	Raichur	30-4-2010	09-5-2010
21.	Prl. Senior Civil Judge and CJM, Raichur.	Raichur	10-5-2010	16-5-2010
22.	Presiding Officer, Fast Track Court-I, Raichur.	Raichur	17-5-2010	23-5-2010
23.	Judge, Family Court, Mysore.	Mysore	26-4-2010	09-5-2010
24.	V Addl. District and Sessions Judge, Mysore.	Mysore	10--5-2010	12-5-2010
25.	IV Addl. District and Sessions judge, Mysore.	Mysore	13-5-2010	23-5-2010

By Order of the High Court,
P. KRISHNA BHAT,
REGISTRAR (JUDICIAL)

PR. 588

NOTIFICATION

No.GOB (I) 18/2010, Bangalore, Dated 21st April, 2010

PART-I

In exercise of the powers conferred by Clause (a) of Sub-Section (3) of Section 21 of the Karnataka Small Causes Courts Act, 1964, the High Court of Karnataka hereby designates the Civil Judges mentioned in Column No. 2 of the table below as the vacation Judges for the duration of adjournment of Small Causes Courts mentioned in Column No. 3 for the periods of Summer Vacation of 2010 noted in Column No.4.

TABLE

Sl. No.	Designation	Small Causes Court	Periods	
			From	To
1	2	3	4	
1.	Judge, Court of Small Causes, Bangalore.	Bangalore	26-4-2010	02-5-2010
2.	XIV Addl. Judge, Court of Small Causes, Bangalore.	Bangalore	03-5-2010	09-5-2010
3.	XX Addl. Judge, Court of Small Causes, and XVIII Addl. Chief Metropolitan Magistrate, Bangalore.	Bangalore	10-5-2010	16-5-2010
4.	XXIII Addl. Judge, Court of Small Causes and XXI Addl. Chief Metropolitan Magistrate, Bangalore.	Bangalore	17-5-2010	23-5-2010
5.	Addl. Judge, Court of Small Causes, Mysore.	Mysore	26-4-2010	09-5-2010
6.	Judge, Court of Small Causes, Mysore.	Mysore	10-5-2010	23-5-2010

PART- II

In exercise of the powers conferred under Clause (b) of Sub-Section (3) of Section 21 of the Karnataka Small Causes Courts Act, 1964 the Vacation Judges of Court of Small Causes are hereby directed to dispose of urgent civil matters in which injunction, stay of Proceedings and attachment orders etc., are sought for, during the Summer Vacation of 2010.

PART- III

In exercise of the powers conferred by Sub-Section (5) of Section 21 of the Karnataka Small Causes Courts Act, 1964, the Vacation Judges are directed to have the Administrative control over the Staff of Court of Small Causes concerned, during the Summer Vacation of 2010, in the absence of unit head in the headquarters.

By Order of the High Court,
P. KRISHNA BHAT,
REGISTRAR (JUDICIAL)

PR. 589

NOTIFICATION

No. GOB(I) 3/2010, Bangalore, Dated 15th April, 2010

In exercise of the powers conferred under Section 11(3) of the Code of Criminal Procedure, 1973, the High Court of Karnataka hereby confers the powers of Judicial Magistrate First Class on the Addl. Civil Judge (Jr. Dn.), Belthangady, with immediate effect and until further orders

By Order of the High Court,
R. B. BUDIHAL,
Registrar General.

PR. 590

NOTIFICATION

No. GOB(I) 16(59)/2009, Bangalore, Dated 12th April, 2010

Sri P. Srinivasa, Addl. Senior Civil Judge and JMFC., Raichur, is permitted to surrender 30 days of Earned Leave from 01-06-2010 to 30-06-2010 (bdi), for the block period 2009-10.

The Officer shall be paid pay and allowances admissible for the period of leave so surrendered at the rate of 1/30th of the monthly pay and allowances for each day of leave surrendered as per the provisions contained in Rule 118(2) of K.C.S.Rs.

By Order of the High Court,
Deputy Registrar

PR. 591

NOTIFICATION

No. GOB(I) 412/2000, Bangalore, Dated 12th April, 2010

The High Court of Karnataka hereby confers powers of Judicial Magistrate First Class on the Prl. Civil Judge, Bantwal, Prl. Civil Judge, Puttur and Addl.Civil Judge, Belthangady, under Section 11 (3) of the Code of Criminal Procedure, 1973, with immediate effect and until further orders.

By Order of the High Court,
R. B. BUDIHAL,
Registrar General.

PR. 592

NOTIFICATION

No.GOB (I) 18/2010, Bangalore, Dated 21st April, 2010

PART-I

In exercise of the powers vested under sub-section (2) of Section 12 of the Code of Criminal Procedure, 1973 (Central Act No. 2/1974), the High Court of Karnataka hereby appoints the Civil Judges (Sr. Dn.) mentioned in Column No. 2 as Addl. Chief Judicial Magistrates for the Districts mentioned in Column No. 3 for the periods mentioned in Column No. 4 during Summer Vacation 2010.

TABLE

Sl. No.	Designation	District Court	Periods	
			From	To
1	**2**	**3**	**4**	
1.	Prl. Senior Civil Judge, Bangalore Rural District, Bangalore.	Bangalore Rural	03-05-2010	09-5-2010
2.	II Addl. Senior Civil Judge, Bangalore Rural District, Bangalore.	Bangalore Rural	10-5-2010	23-5-2010
3.	Addl. Senior Civil Judge, Bidar.	Bidar	10-5-2010	23-5-2010
4.	I Addl. Senior Civil Judge, Davanagere.	Davanagere	03-5-2010	09-5-2010
5.	II Addl. Senior Civil Judge, Davanagere.	Davanagere	10-5-2010	11-5-2010
6.	Prl. Senior Civil Judge, Hubli.	Dharwad	10-5-2010	16-5-2010

7.	Addl. Senior Civil Judge, Hassan.	Hassan	02-05-2010	09-05-2010
8.	Addl. Senior Civil Judge, Raichur.	Raichur	30-04-2010	09-05-2010
9.	Addl. Senior Civil Judge, Ramanagara.	Ramanagara	03-05-2010	09-05-2010
10.	Addl. Senior Civil Judge, Karwar.	U. K. Karwar	10-05-2010	23-05-2010
11.	Senior Civil Judge, Shorapur.	Yadgir	10-05-2010	23-05-2010

PART- II

In exercise of the powers conferred under Section 9(5) of the Code of Criminal Procedure, 1973, the Civil Judges (Sr. Dn.) mentioned in Column No. 2 of the above table are hereby directed to dispose of any urgent application which is, or may be, made or pending before the District Judge of the District Courts mentioned in Column No. 3 of the above table, during Summer Vacation of 2010.

By Order of the High Court,
P. KRISHNA BHAT,
REGISTRAR (JUDICIAL)

PR. 593

NOTIFICATION

No. GOB(I) 73/2009, Bangalore, Dated 17th April, 2010

In modification of the earlier Notification of even No. GOB(I) 73/2009 dated 06-02-2010, Sri Ravi @ Ravindra D. Ari, the then Civil Judge (Jr. Dn.) and JMFC, Hirekerur, presently working as CivilJudge (Jr. Dn.) and JMFC, Soraba, is granted ;

1. Earned leave for 55 days from 12-01-2009 to 07-03-2009 (bdi) with permission to prefix the General Holidays on 10-01-2009 and 11-01-2009, on Medical Grounds, and
2. Extraordinary Leave for 54 days from 08-03-2009 to 30-04-2009, on Medical Grounds.

The Civil Judge (Jr. Dn.) and JMFC, Byadagi, has been placed in additional charge of the court of the Civil Judge (Jr. Dn.) and JMFC, Hirekerur, during the above said leave periods.

Sri Ravi @ Ravindra D. Ari, the then Civil Judge (Jr. Dn.) and JMFC, Hirekerur, presently working as Civil Judge (Jr. Dn.) and JMFC, Soraba, is re-posted to the same post on expiry of the above said leave periods.

By Order of the High Court,
Deputy Registrar.

PR. 594

NOTIFICATION

No.GOB (I) 18/2010, Bangalore, Dated 21st April, 2010

PART-I

In exercise of the powers conferred by Sub-Section (3) of Section 11 of the Bangalore City Civil Court Act,1979 the High Court of Karnataka hereby designates the following judges of the Bangalore City Civil Court, mentioned in Column No. 2 of the table below, as the Vacation City Civil Judge, for hearing of all the matters which are required to be immediately and promptly dealt with during Summer Vacation of 2010 for the periods mentioned in Column No. 4 of the table below.

TABLE

Sl. No.	Designation	City Civil Court	Periods	
			From	To
1	2	3	4	
1.	XX Addl. City Civil and Sessions Judge, Bangalore.	Bangalore	26-04-2010	30-04-2010
2.	XXIX Addl. City Civil and Sessions Judge, Bangalore.	Bangalore	01-05-2010	09-05-2010
3.	I Addl. City Civil and Sessions Judge, Bangalore.	Bangalore	10-05-2010	16-05-2010
4.	XXIV Addl. City Civil and Sessions Judge, Bangalore.	Bangalore	17-05-2010	23-05-2010

PART- II

In exercise of the powers conferred under Sub-Section (3)(a) of Section 11 of the Bangalore City Civil Court Act, 1979 the Vacation City Civil Judges are directed to dispose of urgent civil matters in which injunction, stay of proceedings and attachment orders etc., are sought for during the Summer Vacation of 2010.

PART- III

In exercise of the powers conferred under Sub-Section (3)(c) of Section 11 of the Bangalore City Civil Court Act, 1979 the Vacation City Civil Judges are directed to exercise the same administrative control over the staff of the City Civil Court, Bangalore, that are being exercised by the Principal City Civil and Sessions Judge, Bangalore, during the period of Summer Vacation of 2010, in the absence of Prl. City Civil and Sessions Judge, Bangalore.

By Order of the High Court,
P. KRISHNA BHAT,
REGISTRAR (JUDICIAL)

PR. 595

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಗ್ರಾಅಪ 1 ಕಗ್ರಾಮೂಅನಿ 2010, ಬೆಂಗಳೂರು, ದಿನಾಂಕ : 17ನೇ ಏಪ್ರಿಲ್ 2010.

ಸರ್ಕಾರದ ಅಧಿಸೂಚನೆ ಸಂಖ್ಯೆ : DPAR 252 SAS 2010 ದಿನಾಂಕ 16-04-2010ನ್ನು ಅನುಸರಿಸಿ, ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಯಮಿತದ ಸಂಘ ನಿಯಮಗಳ (Memorandum and Articles of Association) ನಿಯಮ 75(1)ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಶ್ರೀ ಎನ್. ಗೋಕುಲ್ ರಾಮ್, ಭಾಆಸೇ, (KN 74) ರವರನ್ನು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸದರಿ ಕಂಪನಿಯ ನಿರ್ದೇಶಕರ ಮಂಡಳಿಯ ನಿರ್ದೇಶಕರು ಹಾಗೂ ಅಧ್ಯಕ್ಷರನ್ನಾಗಿ, ಶ್ರೀ ಪಿ. ರವಿಕುಮಾರ್, ಭಾಆಸೇ, (KN 84)ರವರ ಜಾಗದಲ್ಲಿ ನೇಮಿಸಿದೆ ಹಾಗೂ ಶ್ರೀ ಪಿ. ರವಿಕುಮಾರ್, ಭಾಆಸೇ, (KN 84), ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರನ್ನು ಸದರಿ ಕಂಪನಿಯ ನಿರ್ದೇಶಕ ಮಂಡಳಿಯ ನಿರ್ದೇಶಕರನ್ನಾಗಿ ಯಥಾಸ್ಥಿತಿಯಲ್ಲಿ ಮುಂದುವರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್. ಯು. ಶಿವಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪಿ.ಆರ್. 596

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಮೇ ೧೩, ೨೦೧೦ (ವೈಶಾಖ ೨೩, ಶಕ ವರ್ಷ ೧೯೩೨)	ಸಂಚಿಕೆ ೧೯

ಭಾಗ-೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಪ-ವಿಭಾಗ, ಹಿರೇಕೆರೂರ

ಅಧಿಸೂಚನೆ ಸಂಖ್ಯೆ:ಸಕಾನಿಇಂ ಲೋಇ/ ಮಾಹ/ 2009-10/ ದಿನಾಂಕ:

2005ರ ಮಾಹಿತಿ ಹಕ್ಕು ಅಧಿನಿಯಮ (2005ರ ಕೇಂದ್ರ ಕಾಯ್ದೆ 22)ರ ಅಡಿಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ, ಲೋಕೋಪಯೋಗಿ ಇಲಾಖೆ ಉಪ-ವಿಭಾಗ, ಹಿರೇಕೆರೂರ ಕಛೇರಿಯನ್ನು ಸಾರ್ವಜನಿಕ ಪ್ರಾಧಿಕಾರವೆಂದು ಪರಿಗಣಿಸಿ ಸದರೀ ಅಧಿನಿಯಮದ ಸೆಕ್ಷನ್-5(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡಂತೆ ಅಧಿಕಾರಿಗಳನ್ನು "ಸಾರ್ವಜನಿಕ ಮಾಹಿತಿ ಅಧಿಕಾರಿ" ಮತ್ತು ಸೆಕ್ಷನ್-5(2) ರಡಿಯಲ್ಲಿ ಸಾರ್ವಜನಿಕ ಸಹಾಯಕ ಮಾಹಿತಿ ಅಧಿಕಾರಿ ಹಾಗೂ ಸೆಕ್ಷನ್-19(1)ರಡಿಯಲ್ಲಿ "ಮೇಲ್ಮನವಿ ಪ್ರಾಧಿಕಾರ" ಎಂದು ನೇಮಕ ಮಾಡಲಾಗಿದೆ.

ಅ. ನಂ.	ಕಛೇರಿ ಮತ್ತು ಪೂರ್ಣ ವಿಳಾಸ	ಸಾರ್ವಜನಿಕ ಮಾಹಿತಿ ಅಧಿಕಾರಿ ಸೆಕ್ಷನ್ 5(1)	ಸಾರ್ವಜನಿಕ ಸಹಾಯಕ ಮಾಹಿತಿ ಅಧಿಕಾರಿ ಸೆಕ್ಷನ್ 5(2)	ಮೇಲ್ಮನವಿ ಪ್ರಾಧಿಕಾರ ಸೆಕ್ಷನ್ 19(1)
1	ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಪ-ವಿಭಾಗ, ಹಿರೇಕೆರೂರ	ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ, ಲೋಕೋಪಯೋಗಿ ಇಲಾಖೆ ಉಪ-ವಿಭಾಗ, ಹಿರೇಕೆರೂರ	ಸಹಾಯಕ ಇಂಜನೀಯರ, (ಸೇವೆಯಲ್ಲಿ ಹಿರಿಯರು) ಲೋಕೋಪಯೋಗಿ ಇಲಾಖೆ ಉಪ-ವಿಭಾಗ, ಹಿರೇಕೆರೂರ	ಕಾರ್ಯನಿರ್ವಾಹಕ ಇಂಜನೀಯರ, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ,
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ಉಪ-ವಿಭಾಗ, ಹಿರೇಕೆರೂರ.

ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005 (ಭಾರತ ಸರ್ಕಾರ)

ಕರ್ನಾಟಕ ಸರ್ಕಾರ

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಪ-ವಿಭಾಗ, ಹಿರೇಕೆರೂರ

ಕೈಪಿಡಿ-1

ಸಂಸ್ಥೆಯ ವಿವರಗಳು ಮತ್ತು ಕರ್ತವ್ಯ ಮತ್ತು ವಿಧಿಗಳು:

ಕರ್ನಾಟಕ ರಾಜ್ಯದಲ್ಲಿನ ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲೂಕಿನ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವ್ಯಾಪ್ತಿಯ ರಸ್ತೆಗಳ ನಿರ್ಮಾಣ ನಿರ್ವಹಣೆ ಮತ್ತು ದುರಸ್ತಿ ಕಾರ್ಯಗಳನ್ನು ಲೋಕೋಪಯೋಗಿ ಇಲಾಖೆಯ ವಸತಿ ಗೃಹಗಳು, ಸರ್ಕಾರಿ ಕಛೇರಿ ಕಟ್ಟಡಗಳ ನಿರ್ಮಾಣವನ್ನು ಸುಗಮವಾಗಿ ಹಾಗೂ ಸುವ್ಯವಸ್ಥಿತವಾಗಿ ನಿರ್ವಹಿಸುವ ದೃಷ್ಟಿಯಿಂದ 20-9-1994ರಿಂದ ಅಸ್ತಿತ್ವಕ್ಕೆ ಬಂದಿರುತ್ತದೆ. ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ಹಾವೇರಿ, ಅಧೀಕ್ಷಕ ಇಂಜನೀಯರ, ಲೋಕೋಪಯೋಗಿ ವೃತ್ತ ಇಲಾಖೆ, ಧಾರವಾಡ ವೃತ್ತ, ಧಾರವಾಡ ಹಾಗೂ ಮುಖ್ಯ ಇಂಜನೀಯರ, ಸಂಪರ್ಕ ಮತ್ತು ಕಟ್ಟಡ (ಉತ್ತರ) ಧಾರವಾಡ ಇಲಾಖೆ, ಧಾರವಾಡ ಇವರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿದೆ.

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್ ಇವರು ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪ-ವಿಭಾಗ, ಹಿರೇಕೆರೂರ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ. ಇವರ ಅಧೀನದಲ್ಲಿ 4 ಶಾಖೆಗಳು ಕಾರ್ಯನಿರ್ವಹಿಸುತ್ತವೆ.

1. ತಾಂತ್ರಿಕ ಶಾಖೆ
2. ಆಡಳಿತ ಶಾಖೆ
3. ಲೆಕ್ಕ ಶಾಖೆ
4. ಉಗ್ರಾಣ ಶಾಖೆ

1. ತಾಂತ್ರಿಕ ಶಾಖೆ:-

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರವರು ಈ ಉಪ-ವಿಭಾಗ ಕಾರ್ಯಾಲಯದ ತಾಂತ್ರಿಕ ವಿಷಯಗಳಿಗೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳ ಕಾರ್ಯಭಾರವನ್ನು ಹೊಂದಿದ್ದು, ಇವರಿಗೆ ಸಹಾಯಕ್ಕಾಗಿ ಸಹಾಯಕ ಇಂಜನೀಯರರು-04, ಕಿರಿಯ ಇಂಜನೀಯರರು-01 ಕಾರ್ಯನಿರ್ವಹಿಸುತ್ತಾರೆ.

1. ಉದ್ದೇಶಿಸಿರುವ ರಸ್ತೆ, ಸೇತುವೆ ಮತ್ತು ಕಟ್ಟಡ ಕಾಮಗಾರಿಗಳ ನಿರ್ಮಾಣ ಹಾಗೂ ನಿರ್ವಹಣೆ ಹಾಗೂ ಪರಿವೀಕ್ಷಣೆ ಹಾಗೂ ತಾಂತ್ರಿಕವಾಗಿ ಪರಿಶೀಲಿಸುವುದು.
2. ಅಂದಾಜು ಪಟ್ಟಿ ಹಾಗೂ ವಿನ್ಯಾಸಗಳನ್ನು ತಯಾರಿಸಿ ಆಡಳಿತಾತ್ಮಕ ಅನುಮೋದನೆಗಾಗಿ ಹಾಗೂ ತಾಂತ್ರಿಕ ಮಂಜೂರಾತಿಗಾಗಿ ವಿಭಾಗ ಕಛೇರಿಗೆ ಸಲ್ಲಿಸುವುದು.
3. ಯೋಜನೆಗಳ ಅನುಷ್ಠಾನದ ಪ್ರಗತಿ ಪತ್ರಿಕೆಗಳನ್ನು ತಯಾರಿಸಿ ವಿಭಾಗ ಕಛೇರಿಗೆ ಸಲ್ಲಿಸುವುದು.
4. ಎಂ.ಎಂ.ಆರ್ ಮತ್ತು ಕೆ.ಡಿ.ಪಿ ಸಭೆಗಳಿಗೆ ಪ್ರಗತಿ ವರದಿ ತಯಾರಿಸುವುದು ಮತ್ತು ಹಾಜರಾಗುವುದು.
5. ಕಾಮಗಾರಿಗಳ ಕಾರ್ಯಕ್ರಮ ಪಟ್ಟಿ ತಯಾರಿಸುವುದು ಹಾಗೂ ಅನುಮೋದನೆ ಪಡೆಯುವುದು.
6. ತಾಲೂಕ ಮಟ್ಟದ ಕೆ.ಡಿ.ಪಿ ಸಭೆಗೆ ಪ್ರಗತಿ ವರದಿ ತಯಾರಿಸುವುದು ಹಾಗೂ ಹಾಜರಾಗುವುದು.
7. ಯೋಜನೆಗಳ ನಿರ್ಮಾಣದ ಪಾವತಿಗಳನ್ನು ನಮೂದಿಸಿ ತಯಾರಿಸಿ ವಿಭಾಗ ಕಛೇರಿಗೆ ಸಲ್ಲಿಸುವುದು.

2. ಆಡಳಿತ ಶಾಖೆ:-

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಪ-ವಿಭಾಗ. ಹಿರೇಕೆರೂರ ಕಛೇರಿಯಲ್ಲಿ ಮಂಜೂರಾದ ಹುದ್ದೆಗಳು ಒಟ್ಟು 14 ಹಾಗೂ ಹೆಚ್ಚುವರಿ ಸೂಪರ್ ನ್ಯೂಮರಿ ಹುದ್ದೆಗಳು 3, ಒಟ್ಟು 17 ಹುದ್ದೆಗಳು ಇದ್ದು, ಇವುಗಳಲ್ಲಿ ಮಂಜೂರಾದ ಹುದ್ದೆಗಳಲ್ಲಿ 14 ಹಾಗೂ ಹೆಚ್ಚುವರಿ ಹುದ್ದೆಗಳು 3 ಒಟ್ಟು 17 ಜನ ಸಿಬ್ಬಂದಿಯವರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಂಖ್ಯೆಗಳ ಪೈಕಿ ಹಾಲಿ ಕಾರ್ಯನಿರ್ವಹಿಸುತ್ತಿರುವ ವರ್ಗ ಎ-1 ವರ್ಗ ಬಿ-4 ವರ್ಗ ಸಿ-4 ಮತ್ತು ವರ್ಗ ಡಿ-3 ಮಂಜೂರಾದ ಹುದ್ದೆಗಳಲ್ಲಿದ್ದರೆ, ಹೆಚ್ಚುವರಿ ಹಾಗೂ ಸೂಪರ್ ನ್ಯೂಮರಿ ಹುದ್ದೆಯಲ್ಲಿ ಗ್ರೂಪ್ ಡಿ-3 ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಆಡಳಿತ ಶಾಖೆಯಲ್ಲಿ ಇಬ್ಬರು ದ್ವಿತೀಯ ದರ್ಜೆ ಸಹಾಯಕರು ಕಾರ್ಯನಿರ್ವಹಿಸುತ್ತಿದ್ದು, ಇವರಲ್ಲಿ ಒಬ್ಬರು ಆಡಳಿತಕ್ಕೆ ಸಂಬಂಧಪಟ್ಟಂತೆ ನೌಕರರ ಸೇವಾ ವಿವರಗಳು, ಸಿಬ್ಬಂದಿ ವೇತನ ಬಿಲ್ಲು, ವಿದ್ಯುಚ್ಛಕ್ತಿ ಮತ್ತು ದೂರವಾಣಿ ಬಿಲ್ಲು

ಹಾಗೂ ಸದರೀ ನೌಕರರ ರಜೆ ಇತ್ಯಾದಿಗಳ ನಿರ್ವಹಣೆ ಮತ್ತು ಸಿಬ್ಬಂದಿಗೆ ಸಂಬಂಧಪಟ್ಟ ನಿಯತಕಾಲಿಕಗಳನ್ನು ಸಲ್ಲಿಸುವ ಕಾರ್ಯಗಳನ್ನು ಸಹಾಯಕ ಕಾರ್ಯನಿರ್ವಾಹಕ ಇಂಜನೀಯರವರ ಆದೇಶಗಳ ಮೇರೆಗೆ ಕಾರ್ಯನಿರ್ವಹಿಸುತ್ತಾರೆ. ಈ ಆಡಳಿತ ಶಾಖೆಯಲ್ಲಿ ನಿರ್ವಹಿಸುವ ಸಂಕ್ಷಿಪ್ತ ಕೆಲಸಗಳ ವಿವರಗಳ್ನು ಈ ಕೆಳಕಂಡಂತೆ ನೀಡಲಾಗಿದೆ.

1. ಆಡಳಿತ ಶಾಖೆಯು ಆಡಳಿತಕ್ಕೆ ಸಂಬಂಧಪಟ್ಟಂತೆ ನೌಕರರ ಸೇವಾ ವಿವರಗಳ ಹಾಗೂ ಬಡ್ತಿಗಳ ಮತ್ತು ನಿವೃತ್ತಿ, ಪಿಂಚಣಿ, ರಜೆ ವಗ್ಯೆರೆಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಸಲ್ಲಿಸುವುದು ಮತ್ತು ನಿರ್ವಹಿಸುವುದು.
2. ಸಿಬ್ಬಂದಿ ವರ್ಗದ ವೇತನ ಬಿಲ್ಲುಗಳನ್ನು ಹಾಗೂ ಸಾದಿಲ್ವಾರು ಬಿಲ್ಲುಗಳನ್ನು ಸಿದ್ದಪಡಿಸುವುದು ಮತ್ತು ಸಂಬಂಧಪಟ್ಟಂತೆ ಅನುದಾನ ವಗ್ಯೆರೆಗಳನ್ನು ಬಿಲ್ಲುಗಳಿಗೆ ಸಕ್ಷಮ ಅಧಿಕಾರಿಯ ಅನುಮೋದನೆ ಪಡೆದ ನಂತರವೇ ನಗದೀಕರಣಕ್ಕೆ ಸಲ್ಲಿಸುವುದು.
3. ನೌಕರರ ವಾರ್ಷಿಕ ವರದಿಗಳಾದ ಆಸ್ತಿ ಮತ್ತು ಹೊಣೆಗಾರಿಕೆ ಪಟ್ಟಿ ಹಾಗೂ ಕಾರ್ಯನಿರ್ವಹಣಾ ವರದಿಗಳನ್ನು ನೌಕರರಿಂದ ಪಡೆದು ಮೇಲಾಧಿಕಾರಿಗಳ ಅವಗಾಹನೆಗೆ ಸಲ್ಲಿಸುವುದು.
4. ಆಡಳಿತಕ್ಕೆ ಸಂಬಂಧಿಸಿದಂತೆ ಉಪ-ವಿಭಾಗದ ಆಯವ್ಯಯ ಅಂದಾಜು ಪಟ್ಟಿಯ ವಿವರಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲು ಸಿದ್ದಪಡಿಸುವುದು.
5. ಆಡಳಿತ ಶಾಖೆಯ ಇನ್ನೊಬ್ಬ ದ್ವಿತೀಯ ದರ್ಜೆ ಸಹಾಯಕರು ಕಛೇರಿಗೆ ಬರುವ ಮತ್ತು ಕಛೇರಿಯಿಂದ ಹೋಗುವ ಪತ್ರಗಳ ಸ್ವೀಕೃತಿ ಮತ್ತು ರವಾನೆ ಕಾರ್ಯದೊಂದಿಗೆ ವಿಭಾಗ ಕಛೇರಿಯಿಂದ ನೀಡುವ ಅಳತೆ ಪುಸ್ತಕಗಳು, ನಾಮಾಂಕಿತ ಸಮುದಾಯ ಹಾಜರಾತಿ ಪಟ್ಟಿ ಇವುಗಳ ದಾಖಲೆಗಳ ನಿರ್ವಹಣೆ ಹಾಗೂ ಅಂಚೆ ಚೀಟಿಗಳ ದಾಸ್ತಾನು ನಿರ್ವಹಣೆ ನಿರ್ವಹಿಸುತ್ತಾರೆ. ಇದರೊಂದಿಗೆ ವಾರ್ಷಿಕ ತಪಾಸಣಾ ವರದಿಗಳಿಗೆ ಪಾಲನಾ ವರದಿಯನ್ನು ಕ್ರೂಢೀಕರಿಸಿ ಸಲ್ಲಿಸುವ ಕಾರ್ಯ ನಿರ್ವಹಿಸುತ್ತಾರೆ.

3. ಲೆಕ್ಕ ಪತ್ರ ಶಾಖೆ:-

ಈ ಶಾಖೆಯಲ್ಲಿ ಒಬ್ಬ ಪ್ರಥಮ ದರ್ಜೆ ಸಹಾಯಕರು ಕೆಲಸ ನಿರ್ವಹಿಸುತ್ತಾರೆ. ಉಪ-ವಿಭಾಗಕ್ಕೆ ಸಂಬಂಧಪಟ್ಟಂತೆ ಕಾಮಗಾರಿಗಳ ನಗದು ಪುಸ್ತಕಗಳ ನಿರ್ವಹಣೆ, ಬಾಕಿ ಬಿಲ್ಲುಗಳ ಪರಿಶೀಲನೆಯೊಂದಿಗೆ ವಿಭಾಗ ಕಛೇರಿಗೆ ಸಲ್ಲಿಸುವುದು ಹಣ ಭರವಸೆ ಪತ್ರ ಬೇಡಿಕೆ ಪತ್ರ ಸಲ್ಲಿಸುವುದು. ಇದಲ್ಲದೇ ಲೆಕ್ಕ ಪತ್ರ ಶಾಖೆಗೆ ಸಂಬಂಧಿಸಿದ ಎಲ್ಲ ಪತ್ರ ವ್ಯವಹಾರಗಳನ್ನು ನಿರ್ವಹಿಸುವುದು.

4. ಉಗ್ರಾಣ ಶಾಖೆ:-

ಈ ಇಲಾಖೆಯಲ್ಲಿ ಒಬ್ಬ ದ್ವಿತೀಯ ದರ್ಜೆ ಸಹಾಯಕರು ಕೆಲಸ ನಿರ್ವಹಿಸುತ್ತಿದ್ದಾರೆ. ದಾಸ್ತಾನು ಸಾಮಗ್ರಿಗಳ ಹಾಗೂ ಯಂತ್ರೋಪಕರಣ ಸಾಮಗ್ರಿಗಳ ಹಾಗೂ ಸ್ಥಿರ ಸಾಮಗ್ರಿಗಳ ಪತ್ರ ವ್ಯವಹಾರ ಹಾಗೂ ಅವಶ್ಯವಿದ್ದಲ್ಲಿ ವಿಭಾಗ ಕಛೇರಿಗೆ ಬೇಡಿಕೆ ಪತ್ರ ಸಲ್ಲಿಸುವುದು. ಕಛೇರಿಗೆ ಅವಶ್ಯವಿರುವ ಲೇಖನಿ ಸಾಮಗ್ರಿಗಳನ್ನು ಖರೀದಿಸುವುದು. ನಿರುಪಯುಕ್ತ ಸಾಮಗ್ರಿಗಳ ಬಗ್ಗೆ ಸರ್ವೆ ವರದಿಯನ್ನು ಸಲ್ಲಿಸುವುದು. ಉಗ್ರಾಣಕ್ಕೆ ಸಂಬಂಧಪಟ್ಟ ಲೆಕ್ಕ ಪತ್ರ ಮಾಹಿತಿಯನ್ನು ವಿಭಾಗಕಛೇರಿಗೆ ಸಲ್ಲಿಸುವುದು.

ಕೈಪಿಡಿ-2

ಸಂಸ್ಥೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ಅಧಿಕಾರ ಮತ್ತು ವಿಧಿಗಳ ವಿವರ.

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಪ-ವಿಭಾಗ, ಹಿರೇಕೆರೂರ ಇವರು ಉಪ-ವಿಭಾಗದ ಮುಖ್ಯಸ್ಥರಿದ್ದು, ಇವರು ಕಾರ್ಯನಿರ್ವಾಹಕ ಇಂಜನೀಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ಹಾವೇರಿ ಇವರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಾರೆ.

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರವರ ಕಾರ್ಯಭಾರ ಈ ಕೆಳಗಿನಂತಿರುತ್ತದೆ.

1. ಪ್ರತಿಯೊಂದು ಉಪ-ವಿಭಾಗದ ಮುಖ್ಯಸ್ಥರಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರವರು ಇರುತ್ತಾರೆ. ಇವರು ಉಪ-ವಿಭಾಗದ ಕಾಮಗಾರಿಗಳ ಶೇ.100 ರಷ್ಟು ಪರಿಶೀಲನೆ ಮಾಡಬೇಕಾಗುತ್ತದೆ.
2. ಮೇಲಾಧಿಕಾರಿಗಳು ನೀಡಿರುವ ತಪಾಸಣೆಯ ಟಿಪ್ಪಣಿಗಳಿಗೆ ತ್ವರಿತವಾಗಿ ಅನುಸರಣಾ ವರದಿಯನ್ನು ನಿಯಮಾವಳಿಗಳಂತೆ ಸಲ್ಲಿಸುವುದು.
3. ಉಪ-ವಿಭಾಗದ ಸಿಬ್ಬಂದಿ, ಲೆಕ್ಕ ವಿಚಾರಗಳು ಮತ್ತು ತಾಂತ್ರಿಕ ವಿಚಾರಗಳು, ಉಗ್ರಾಣದ ಲೆಕ್ಕ ವಿಚಾರಗಳು ಈ ಎಲ್ಲವನ್ನು ನಿರ್ವಹಿಸುವಲ್ಲಿ ಅವರೇ ಜವಾಬ್ದಾರರಾಗಿರುತ್ತಾರೆ.

4. ಉಪ-ವಿಭಾಗದಲ್ಲಿ ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಸಹಾಯಕ ಇಂಜನೀಯರ್, ಕಿರಿಯ ಇಂಜನೀಯರ್, ಬೆರಳಚ್ಚುಗಾರರು ಉಪ-ವಿಭಾಗದ ಕೆಲಸಗಳನ್ನು ಜವಾಬ್ದಾರಿಯುತರಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರವರಿಗೆ ಕೆಲಸ ನಿರ್ವಹಿಸಲು ಸಹಾಯಕರಾಗಿರುತ್ತಾರೆ.
5. ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು, ಕಾರ್ಯನಿರ್ವಾಹಕ ಇಂಜನೀಯರವರಿಗೆ ಮಾಹಿತಿಯನ್ನು ನಿಗದಿತ ದಿನಾಂಕದೊಳಗೆ ಎಲ್ಲಾ ನಿಯತಕಾಲಿಕೆಗಳನ್ನು ನಿಯಮಾನುಸಾರ ಸಲ್ಲಿಸಲು ಕ್ರಮ ತೆಗೆದುಕೊಳ್ಳುವುದು.
6. ಕಾಮಗಾರಿಗಳ ಅಂದಾಜು ತಯಾರಿಕೆ, ಕರಡು ಟೆಂಡರ್ ಪತ್ರಗಳ ತಯಾರಿಕೆ, ಗುತ್ತಿಗೆದಾರರಿಗೆ ನಿವೇಶನ ಇತರೇ ಕಾಮಗಾರಿಗಳ ಮಾರ್ಕ್ ಔಟ್ ಮಾಡುವ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರವರು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಸಹಾಯಕ ಇಂಜನೀಯರ್/ಕಿರಿಯ ಇಂಜನೀಯರ್‌ರವರುಗಳು ತಾಂತ್ರಿಕ ವಿಚಾರಗಳು, ಶಾಖಾ ಲೆಕ್ಕಗಳು, ಟಿ ಮತ್ತು ಪಿ ಲೆಕ್ಕಗಳು, ಎಂ.ಇ.ಎಸ್.ಲೆಕ್ಕಗಳು ಮತ್ತು ಇತರೇ ವಾಹನಗಳ ಲೆಕ್ಕಗಳನ್ನು ನಿರ್ವಹಿಸುವರು. ಇವರುಗಳು ಬಿಲ್ಲು ತಯಾರಿಕೆಗಳನ್ನು ನಿರ್ವಹಿಸುವುದು ಅಲ್ಲದೇ ಪುಸ್ತಕಗಳಲ್ಲಿ ಕಾಮಗಾರಿಗಳ ವಿವರಗಳನ್ನು ಮತ್ತು ಅಳತೆಗಳನ್ನು ನಮೂದಿಸಿ ಗುತ್ತಿಗೆದಾರರಿಗೆ ಬಿಲ್ಲು ಪಾವತಿಸುವಲ್ಲಿ ಸರ್ಕಾರವು ನಿಗದಿಪಡಿಸಿದ ಸಮಯದೊಳಗೆ ಪಾವತಿಯಾಗುವಂತೆ ಕ್ರಮ ತೆಗೆದುಕೊಳ್ಳುವುದು.

ಕೈಪಿಡಿ-3

ನಿರ್ಣಯ ತೆಗೆದುಕೊಳ್ಳುವಲ್ಲಿ ಪಾಲಿಸಬೇಕಾದ ವಿಧಿ ವಿಧಾನಗಳು ಮತ್ತು ಪರಿವೀಕ್ಷಣೆ ಹಾಗೂ ಜವಾಬ್ದಾರಿ ವಿವರಗಳು

ಇಲಾಖೆಯು ಕಾಮಗಾರಿಗೆ ಸಂಬಂಧಪಟ್ಟ ಕಾರ್ಯನಿರ್ವಹಿಸುವಲ್ಲಿ

ಲೋಕೋಪಯೋಗಿ ಇಲಾಖೆಯ ಸಂಹಿತೆ ಭಾಗ-1 ಮತ್ತು ಭಾಗ-2 ಕರ್ನಾಟಕ ಪಾರದರ್ಶಕ ನಿಯಮ

ಲೋಕೋಪಯೋಗಿ ಲೆಕ್ಕ ಸಂಹಿತೆ ಭಾಗ-1 ಮತ್ತು ಭಾಗ-2ನ್ನು ಅನುಸರಿಸಲಾಗುವುದು.

ಭೂ ಸ್ವಾಧೀನ ಕಾಯ್ದೆ

ಉಗ್ರಾಣ ಕೈಪಿಡಿ

ಮಧ್ಯಸ್ಥಿಕೆ ಕಾಯ್ದೆಗಳು ಅನುಸರಿಸಲಾಗುತ್ತಿದೆ.

ಆಡಳಿತವನ್ನು ನಿರ್ವಹಿಸಲು

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು

ಕರ್ನಾಟಕ ಆರ್ಥಿಕ ಸಂಹಿತೆ

ಕರ್ನಾಟಕ ಖಜಾನಾ ಸಂಹಿತೆ

ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು

ಇವುಗಳನ್ನು ಅನುಸರಿಸಲಾಗುತ್ತಿದೆ.

ಈ ಇಲಾಖೆಯಲ್ಲಿ ನಿರ್ವಹಿಸಲ್ಪಡುವ ಎಲ್ಲ ಕಾಮಗಾರಿಗಳನ್ನು ಕರ್ನಾಟಕ ಪಾರದರ್ಶಕ ನಿಯಮದ ಅನುಸಾರ ಟೆಂಡರ್ ಕರೆದು ಗುತ್ತಿಗೆದಾರರಿಗೆ ನೀಡಲಾಗುತ್ತಿದೆ. ಗುತ್ತಿಗೆದಾರರನ್ನು ನಿಗದಿಪಡಿಸಿದ ನಂತರ ಅವರಿಗೆ ಕಾರ್ಯಾದೇಶ ನೀಡಲಾಗುತ್ತಿದೆ. ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು ಗುತ್ತಿಗೆದಾರರಿಗೆ ನಿವೇಶನವನ್ನು ಹಸ್ತಾಂತರಿಸಿ ಕೆಲಸವನ್ನು ಅನುಷ್ಠಾನಗೊಳಿಸಲು ಮಾರ್ಕ್ ಔಟ್ ನೀಡಿ ಕೆಲಸ ಚಾಲನೆ ಮಾಡುತ್ತಾರೆ. ಸಂಬಂಧಿಸಿದ ಸಹಾಯಕ/ಕಿರಿಯ ಇಂಜನೀಯರರು ದೈನಂದಿನ ನಿವೇಶನಕ್ಕೆ ಹೋಗಿ ಕೆಲಸ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾರೆ. ಸಹಾಯಕ ಕಾರ್ಯನಿರ್ವಾಹಕ ಇಂಜನೀಯರವರು ಆಗಿಂದಾಗ್ಗೆ ನಿವೇಶನಕ್ಕೆ ಭೇಟಿ ನೀಡಿ ಕೆಲಸವನ್ನು ಪರಿವೀಕ್ಷಿಸುತ್ತಾರೆ. ಹಾಗೆಯೇ ಕಾರ್ಯನಿರ್ವಾಹಕ ಇಂಜನೀಯರರು, ಅಧೀಕ್ಷಕ ಇಂಜನೀಯರರು, ಮುಖ್ಯ ಇಂಜನೀಯರರು ನಿವೇಶನಕ್ಕೆ ಭೇಟಿ ನೀಡಿ ಸಲಹೆ ಸೂಚನೆಗಳನ್ನು ನೀಡುತ್ತಾರೆ. ಪ್ರಗತಿಯನ್ನು ಪರಿಶೀಲಿಸಲು ಕಾರ್ಯನಿರ್ವಾಹಕ ಇಂಜನೀಯರರು, ಅಧೀಕ್ಷಕ ಇಂಜನೀಯರರು ಮತ್ತು ಮುಖ್ಯ ಇಂಜನೀಯರರ ಮಟ್ಟದಲ್ಲಿ ಸಭೆ ನಡೆಸಲಾಗುತ್ತದೆ.

ಅಕೌಂಟ್ ಟೆಬಿಲಿಟಿ ಬಗ್ಗೆ ಮಹಾಲೇಖಾಪಾಲಕರು 2 ವರ್ಷಕ್ಕೊಮ್ಮೆ ಸಂಬಂಧಿತ ಉಪ-ವಿಭಾಗ ಕಛೇರಿಗಳ ಪರಿವೀಕ್ಷಣೆ ಮಾಡುತ್ತಾರೆ. ಅಲ್ಲದೇ ಮುಖ್ಯ ಇಂಜನೀಯರವರ ಕಛೇರಿ, ಅಧೀಕ್ಷಕ ಇಂಜನೀಯರವರ ಕಛೇರಿ, ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿಯಿಂದಲೂ ಉಪ-ವಿಭಾಗಗಳ ತಪಾಸಣೆ ನಡೆಯುತ್ತದೆ. ಕಳಪೆ ಕಾಮಗಾರಿಯ ಬಗ್ಗೆ ಏನಾದರೂ ಅರ್ಜಿ ಬಂದಲ್ಲಿ ಮಾನ್ಯ ಲೋಕಾಯುಕ್ತರು ಕೂಡ ನಿವೇಶನವನ್ನು ಪರಿಶೀಲನೆ ಮಾಡಿ ಏನಾದರೂ ಕಳಪೆ ಕಾಮಗಾರಿ ಇದ್ದಲ್ಲಿ ಸೂಕ್ತ ಕ್ರಮಕ್ಕೆ ಶಿಫಾರಸ್ಸು ಮಾಡುತ್ತಾರೆ.

ಕೈಪಿಡಿ-4

ಕರ್ತವ್ಯಗಳ ನಿರ್ವಹಣೆಯಲ್ಲಿ ಪಾಲಿಸಬೇಕಾದ ಸೂತ್ರಗಳು

ಲೋಕೋಪಯೋಗಿ ಇಲಾಖೆ ಮತ್ತು ನೀರಾವರಿ ಇಲಾಖೆಯ ಅಧಿಕಾರಿಗಳ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ

ಸರ್ಕಾರಿ ಆದೇಶ ಸಂಖ್ಯೆ:ಪಿಡಬ್ಲ್ಯು-1/ಎಫ್‌ಸಿಆರ್ 93/ಬೆಂಗಳೂರು ದಿನಾಂಕ:-15-12-1994

ಸಾಮಾನ್ಯ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ

ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ-1/ಟಿಎಫ್‌ಪಿ 2001 ಬೆಂಗಳೂರು ದಿನಾಂಕ:-02-02-2001

ಲೋಕೋಪಯೋಗಿ ಇಲಾಖೆ ಸಂಹಿತೆ

ಲೋಕೋಪಯೋಗಿ ಇಲಾಖೆ ಆರ್ಥಿಕ ಸಂಹಿತೆ

ಕೆಐಪಿಡಿ-5

ಇಲಾಖೆಯ ಅಧೀನದಲ್ಲಿರುವ ಮತ್ತು ಸಿಬ್ಬಂದಿ ಉಪಯೋಗಿಸುತ್ತಿರುವ ನಿಯಮಗಳು, ವಿನಿಮಯಗಳು, ಸೂಚನೆಗಳು, ದಾಖಲೆಗಳು ಕೈಪಿಡಿಗಳ ವಿವರ

ಕಚೇರಿ ಕೈಪಿಡಿ ನಿಯಮಗಳು, ವಿನಿಮಯಗಳು ಮತ್ತು ಸೂಚನೆಗಳು

ಕರ್ನಾಟಕ ನಾಗರೀಕ ಸೇವಾ ನಿಯಮಗಳು

ಕರ್ನಾಟಕ ಸರಕಾರಿ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು ನಿಯಮಗಳು)

ಕರ್ನಾಟಕ ಆರ್ಥಿಕ ಸಂಹಿತೆ

ಲೋಕೋಪಯೋಗಿ ಇಲಾಖೆಯ ಸಂಹಿತೆ ಭಾಗ-1 ಮತ್ತು ಭಾಗ-2

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 2000

ಲೋಕೋಪಯೋಗಿ ಲೆಕ್ಕ ಸಂಹಿತೆ ಭಾಗ-1 ಮತ್ತು ಭಾಗ-2ನ್ನು ಅನುಸರಿಸಲಾಗುವುದು.

ಭೂಸ್ವಾಧೀನ ಕಾಯ್ದೆ

ಉಗ್ರಾಣ ಕೈಪಿಡಿ

ಮಧ್ಯಸ್ಥಿಕೆ ಕಾಯ್ದೆ 1996

ಕರ್ನಾಟಕ ನೀರಾವರಿ ಕಾಯ್ದೆ 1965

ಸಾದಿಲ್ವಾರು ವೆಚ್ಚದ ಕೈಪಿಡಿ

ಕರ್ನಾಟಕ ಖಜಾನೆ ಸಂಹಿತೆ

ಚಾಲ್ತಿ ದರಪಟ್ಟಿ

ಬಜೆಟ್ ಕೈಪಿಡಿ

ಕೈಪಿಡಿ-6

ಇಲಾಖೆಯ ಅಧೀನದಲ್ಲಿರುವ ವರ್ಗೀಕರಣದ ತಃಖ್ತೆ

ತಾಂತ್ರಿಕ ಶಾಖೆ:-

1) ಕಾರ್ಯನಿರ್ವಾಹಕ ಇಂಜನೀಯರವರ, ಅಧೀಕ್ಷಕ ಇಂಜನೀಯರವರ ಮತ್ತು ಮುಖ್ಯ ಇಂಜನೀಯರವರ ಮಟ್ಟದಲ್ಲಿ ಮಂಜೂರಾದ ಅಂದಾಜು ಪತ್ರಿಕೆಗಳು ಮತ್ತು ಅದಕ್ಕೆ ಸಂಬಂಧಪಟ್ಟ ಕಡತಗಳು
2) ಪ್ರಗತಿಯ ವರದಿಗಳು
3) ಆಯವ್ಯಯಕ್ಕೆ ಸಂಬಂಧಪಟ್ಟ ಆಯವ್ಯಯ ಪ್ರಸ್ತಾವನೆ ಮತ್ತು ಆಯವ್ಯಯ ಪಟ್ಟಿ
4) ಭಾರಿ ಹಾಗೂ ಸಣ್ಣ ಅಂದಾಜುಗಳ ಮಂಜೂರಾತಿ ವಹಿ
5) ಪಿ.ಡಬ್ಲ್ಯೂ.ಡಿ ವಶದಲ್ಲಿರುವ ಸೇತುವೆ ಮತ್ತು ಕಲ್ವರ್ಟ್‌ಗಳ ವಹಿ
6) ದರ ಸೂಚಕ
7) ಆಯವ್ಯಯ ಕಾಮಗಾರಿಗಳ ವಹಿ
8) ಮೇಲಾಧಿಕಾರಿಗಳಿಂದ ಮಂಜೂರಾದ ಅಂದಾಜುಗಳ ಪಟ್ಟಿ.

ಪಿ.ಬಿಯಲ್ಲಿರುವ ರಿಜಿಸ್ಟರ್ ಮಾಹಿತಿ

1) ತುಂಡು ಗುತ್ತಿಗೆ ಪತ್ರ ಅನುಮೋದನೆ ರಿಜಿಸ್ಟರ್
2) ಸೇತುವೆಗಳ ರಿಜಿಸ್ಟರ್

3) ಕಟ್ಟಡಗಳ ರಿಜಿಸ್ಟರ್
4) ಮೇಲಾಧಿಕಾರಿಗಳಿಂದ ಮಂಜೂರಾದ ಅಂದಾಜು ಪತ್ರಿಕೆಗಳ ರಿಜಿಸ್ಟರ್

ದಾಖಲೆಗಳು:- **ಆಡಳಿತ ಶಾಖೆ**

ಉಪ-ವಿಭಾಗ ಕಛೇರಿಯ ತಪಾಸಣೆಗೆ ಅಗತ್ಯವಿರುವ ವಹಿಗಳು ಮತ್ತು ದಾಖಲಾತಿಗಳ ಪಟ್ಟಿ

1) ಹಾಜರಾತಿ ವಹಿ
2) ಪತ್ರಾಂಕಿತವಲ್ಲದ ಅಧಿಕಾರಿಗಳ ಸಾಂದರ್ಭಿಕ ರಜೆ & ಸಾಂದರ್ಭಿಕ ರಜೆ ಕಡತ ಅರ್ಜಿಗಳೊಂದಿಗೆ
3) ಸಂಘಟನಾ ವಹಿ
4) ಮಂಜೂರಾದ ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಹುದ್ದೆಗಳ ತಃಖ್ತೆ
5) ಕೆಲಸ ವಿತರಣಾ ತಃಖ್ತೆ
6) ವೇತನ ಬಡ್ತಿಯ ನಿಗಾ ವಹಿ
7) ವೇತನ ಬಡ್ತಿಯ ಮಂಜೂರಾತಿ ವಹಿ
8) ಇನ್‌ಕಂಬೆನ್ಸಿ ವಹಿ
9) ರಹಸ್ಯ ವರದಿಗಳ ವಹಿ
10) ಆಸ್ತಿ ಮತ್ತು ದಾಯಿತ್ವ ತಃಖ್ತೆ ವಹಿ
11) ಮಹಾಲೇಖಾಪಾಲರು ಮತ್ತು ಇತರರಿಗೆ ಕಳುಹಿಸಲಾದ ನಿವೃತ್ತಿ ವೇತನ ಪತ್ರಗಳ ನಿಗಾ ವಹಿ
12) ಸೇವಾ ಸಹಿ
13) ಇಲಾಖಾ ಪರೀಕ್ಷೆಗಳ ನಿಗಾ ವಹಿ
14) ಪರಿವೀಕ್ಷಣಾ ಟಿಪ್ಪಣಿ ಪುಸ್ತಕ
15) ಕಛೇರಿ ನೌಕರರ ಮನೆಗಳ ವಿಳಾಸ
16) ವಿಧಾನ ಸಭೆ/ಪರಿಷತ್ ಪ್ರಶ್ನೆಗಳ ವಹಿ
17) ವೈಯಕ್ತಿಕ ವಹಿ
18) ಪ್ರತಿ ಮಾಹೆಗಳ ಬಾಕಿ ಪಟ್ಟಿ
19) ಸ್ಟಾಂಪು ವಹಿ ಪರಿವೀಕ್ಷಣಾ ದಿನದಂದು ಬಾಕಿ ಇರುವ ಸ್ಟಾಂಪುಗಳ ಮತ್ತು ಸ್ಟಾಂಪುಗಳ ಬೆಲೆಯನ್ನು ತೋರಿಸುವ ತಃಖ್ತೆ
20) ಸಾಮಾನ್ಯ ಸ್ವೀಕೃತಿ ವಹಿ
21) ರವಾನೆ ವಹಿ
22) ಸ್ಥಳೀಯ ವಿತರಣಾ ರವಾನೆ
23) ಕಛೇರಿ ಆದೇಶ ಪುಸ್ತಕ
24) ಸಾಮಾನ್ಯ ನಗದು ಪುಸ್ತಕ
25) ವೇತನ ಬಟವಾಡೆ ವಹಿ
26) ಪ್ರಯಾಣ ಭತ್ಯೆ ಬಟವಡೆ ವಹಿ
27) ಸಾದಿಲ್ವಾರು ವೆಚ್ಚ ವಹಿ ವೋಚರ್‌ಗಳ ಸಂಹಿತೆ

ಲೆಕ್ಕ ಪತ್ರ ಶಾಖೆ:-

1) ನಗದು ಪುಸ್ತಕ
2) ಚೆಕ್ ಮೆಮೋ ಪುಸ್ತಕ
3) ಎಲ್.ಒ.ಸಿ ರಿಜಿಸ್ಟರ್
4) ರೆಮೆಟೆನ್ಸ್ ರಿಜಿಸ್ಟರ್
5) ಚೆಕ್ ರಿಸೀವ್ಡ್ ರಿಜಿಸ್ಟರ್
6) ಎಸ್.ಬಿ.ಆರ್ ರಿಜಿಸ್ಟರ್
7) ಖಾಲಿ ಅಳತೆ ಪುಸ್ತಕಗಳ ವಹಿ
8) ಎಂ.ಪಿ.ಡಬ್ಲ್ಯು ರಿಜಿಸ್ಟರ್

9) ಟಿ.ಇ.ಒ ರಿಜಿಸ್ಟರ್
10) ವರ್ಕ್ಸ್ ರಿಜಿಸ್ಟರ್
11) ನಮೂನೆ–81
12) ಅಳತೆ ಪುಸ್ತಕಗಳ ಅರ್ಧವಾರ್ಷಿಕ ನಿಯತಕಾಲಿಕೆ

ಉಗ್ರಾಣ ಶಾಖೆ:–

1) ದಾಸ್ತಾನು ಸ್ವೀಕೃತಿ ವಹಿ (PWA-4)
2) ದಾಸ್ತಾನು ವಿತರಣಾ ವಹಿ (PWA-4)
3) ದಾಸ್ತಾನು ಖರೀದಿ ಪುಸ್ತಕ
4) ಅರ್ಧವಾರ್ಷಿಕ ನಿಯತಕಾಲಿಕ ವಹಿ
5) ಖಾಲಿ ಸಾಮಗ್ರಿಗಳ (ಖಾಲಿ ಸಿಮೆಂಟ್ ಚೀಲ ಖಾಲಿ ಡಾಂಬರ್ ಬ್ಯಾರಲ್‌ಗಳ ವಹಿ
6) ಖಾಲಿ ಅಳತೆ ಪುಸ್ತಕಗಳ ವಹಿ
7) ಲೇಖನ ಸಾಮಗ್ರಿಗಳ ಸ್ವೀಕೃತಿ ಮತ್ತು ವಿತರಣಾ ವಹಿ.
8) ಕಛೇರಿ ಪೀಠೋಪಕರಣಗಳ ವಹಿ
9) ಉಪಕರಣ ಮತ್ತು ಸ್ಥಿರ ಯಂತ್ರಗಳ ಸ್ವೀಕೃತಿ ವಹಿ
10) ಉಪಕರಣ ಮತ್ತು ಸ್ಥಿರ ಯಂತ್ರಗಳ ವಿತರಣಾ ವಹಿ
11) ಸೆಪ್ಟೆಂಬರ್ ಅಂತ್ಯದ ಉಪಕರಣ ಮತ್ತು ಸ್ಥಿರ ಯಂತ್ರಗಳ ವಾರ್ಷಿಕ ನಿಯತಕಾಲಿಕೆ
12) ಅಳತೆ ಪುಸ್ತಕಗಳ ಅರ್ಧವಾರ್ಷಿಕ ನಿಯತಕಾಲಿಕ
ಬಿಡುಗಡೆಯಾದ ಸಾಮಗ್ರಿಗಳ ಲೆಕ್ಕದ ವಹಿ

ಕೈಪಿಡಿ–7

ಇಲಾಖೆಯಲ್ಲಿ ನೀತಿ ನಿಯಮಗಳನ್ನು ಅಥವಾ ಆಡಳಿತವನ್ನು ನಡೆಸುವಲ್ಲಿ ಪಡೆಯುವ ಸಲಹಾ ಪತ್ರಗಳ ಅಥವಾ ಸಾರ್ವಜನಿಕ ಸದಸ್ಯರುಗಳಿಂದ ಸಲಹೆ ಪಡೆಯುವ ಬಗ್ಗೆ ಇರುವ ವ್ಯವಸ್ಥೆ ಮತ್ತು ವಿವರ.

--------- ಏನೂ ಇರುವುದಿಲ್ಲ ---------

ಕೈಪಿಡಿ–8

ಇಲಾಖೆಯಲ್ಲಿ ನಿಗಮ/ಪರಿಷತ್ತು/ಸಮಿತಿ ಮತ್ತು ಇತರೆ ಸಂಸ್ಥೆಗಳ ವಿವರ ಮತ್ತು ಅದರ ಉದ್ದೇಶ ಮತ್ತು ಈ ಸಂಸ್ಥೆಗಳ ಸಭೆಗಳು ಮತ್ತು ಸಭೆಯ ನಡುವಳಿಗಳು ಸಾರ್ವಜನಿಕರಿಗೆ ಲಭ್ಯವಿರುವ ಬಗ್ಗೆ.

--------- ಏನೂ ಇರುವುದಿಲ್ಲ ---------

ಕೈಪಿಡಿ–9

ಇಲಾಖೆಯ ಅಧಿಕಾರ ಮತ್ತು ಸಿಬ್ಬಂದಿ ವರ್ಗದ ನಿರ್ದೇಶಿಕೆ

ಈ ಇಲಾಖೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್ ಹಾಗೂ ಕಿರಿಯ ಇಂಜನೀಯರ್ ಇವರ ಅಧಿಕಾರದ ಬಗ್ಗೆ ಕೈಪಿಡಿ–2 ರಲ್ಲಿ ಈಗಾಗಲೇ ತಿಳಿಸಲಾಗಿದೆ.

ಸಿಬ್ಬಂದಿ ವರ್ಗದ ನಿರ್ದೇಶಿತ (ಸಂಘಟನಾ ನಕ್ಷೆ) ಈ ಕೆಳಗೆ ನೀಡಿದೆ.

ಅ. ನಂ.	ಹುದ್ದೆ	ಹೆಸರು
1	ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್–1	ಶ್ರೀ ಎಂ.ಬಿ. ತುರಮರಿ
2	ಸಹಾಯಕ ಇಂಜನೀಯರ್–4	1) ಶ್ರೀ ಬಿ.ಎಸ್. ಪಾಟೀಲ್ 2) ಖಾಲಿ 3) ಖಾಲಿ ಇರುತ್ತದೆ 4) ಖಾಲಿ
3	ಕಿರಿಯ ಇಂಜನೀಯರ್–2	1) ಶ್ರೀ ಮಂಜುನಾಥ ಶೇಪೂರ
		ಖಾಲಿ

ಅ. ನಂ.	ಹುದ್ದೆ	ಹೆಸರು
4	ಪ್ರಥಮ ದರ್ಜೆ ಸಹಾಯಕರು-1	ಖಾಲಿ
5	ಪ್ರಥಮ ದರ್ಜೆ ಭೂಮಾಪಕರು-1	ಖಾಲಿ
6	ದ್ವಿತೀಯ ದರ್ಜೆ ಸಹಾಯಕರು-2	ಶ್ರೀ ಖಾಜಾಮಿಯಾ ಶ್ರೀ ಮಲ್ಲಿಕಸಾಬ್ ಜಮಖಂಡಿ
7	ಕಂಪ್ಯೂಟರ್ ಆಪರೇಟರ್	ಖಾಲಿ
8	ವಾಹನ ಚಾಲಕ-1	ಶ್ರೀ ಎಸ್.ಬಿ. ಕಲ್ಮಠ
7	ಜವಾನರು-2	1) ಶ್ರೀಮತಿ ವಿದ್ಯಾ ಗುರುಪಾದಯ್ಯ ಹರಗಣಿ 2) ಶ್ರೀ ದಾದಾಪೀರ. ಐ. ಮಾಗೋಡ
8	ಕಾವಲುಗಾರರು-1	ಶ್ರೀ ಡಿ.ಐ. ತಳಕಲ್

ಸೂಪರ್ ನ್ಯೂಮರಿ ಹುದ್ದೆಗಳು

1	ಗ್ಯಾಂಗಮನ್-3	ಶ್ರೀ ಧರ್ಮಪ್ಪ ಶಿ. ಮಾಕನೂರ ಶ್ರೀ ನಾಗಪ್ಪ ಲ. ಸಣ್ಣಿಂಗಮ್ಮನವರ ಶ್ರೀ ಮಂಜಪ್ಪ ಬ. ತಿಪ್ಪಣ್ಣನವರ

ಕೈಪಿಡಿ-10

ಇಲಾಖೆಯ ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗದವರ ತಿಂಗಳ ವೇತನ/ ಪ್ರತಿಫಲ ಮತ್ತು ಅದನ್ನು ನೀಡುವ ಸೂತ್ರಗಳು:

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿಯಲ್ಲಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ವೇತನವನ್ನು ಕರ್ನಾಟಕ ಸರ್ಕಾರದ ಸಂಚಿತ ನಿಧಿಯಿಂದ ಪಾವತಿಸಲಾಗಿದೆ.

ಅ. ನಂ.	ಹುದ್ದೆ	ಹೆಸರು	ವೇತನ ಶ್ರೇಣಿ	ಮೂಲ ವೇತನ
1	ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ-1	ಶ್ರೀ ಎಂ.ಬಿ. ತುರಮರಿ	14050-25050	24450-00
2	ಸಹಾಯಕ ಇಂಜನೀಯರ-4	1) ಶ್ರೀ ಬಿ.ಎಸ್. ಪಾಟೀಲ್ 2) ಖಾಲಿ 3) ಖಾಲಿ 4) ಖಾಲಿ	11400-21600 11400-21600 11400-21600 11400-21600	21075-00 ----- -----
3	ಕಿರಿಯ ಇಂಜನೀಯರ್-1	1) ಶ್ರೀ ಮಂಜುನಾಥ. ಶೇಪೂರ 2) ಖಾಲಿ	8825-16000	9275-00
4	ಪ್ರಥಮ ದರ್ಜೆ ಸಹಾಯಕರು-1	ಖಾಲಿ	7275-13350	-----
5	ಪ್ರಥಮ ದರ್ಜೆ ಭೂಮಾಪಕ-1	ಖಾಲಿ	7275-13350	-----
6	ದ್ವಿತೀಯ ದರ್ಜೆ ಸಹಾಯಕ-2	1) ಶ್ರೀ ಖಾಜಾಮಿಯಾ 2) ಶ್ರೀ ಮಲ್ಲಿಕಸಾಬ. ಜಮಖಂಡಿ	5800-10500 5800-10500	5900-00 5800-00
7	ಕಂಪ್ಯೂಟರ ಆಪರೇಟರ್-1	ಖಾಲಿ	5800-10500	-----
8	ಚಾಲಕ-1	ಶ್ರೀ ಎಸ್.ಬಿ. ಕಲ್ಮಠ	5800-10500	9750-00

ಅ. ನಂ.	ಹುದ್ದೆ	ಹೆಸರು	ವೇತನ ಶ್ರೇಣಿ	ಮೂಲ ವೇತನ
9	ಜವಾನ-2	ಶ್ರೀಮತಿ ವಿದ್ಯಾ.ಗು. ಹರಗಣಿ	4800-7275	5000-00
		ಶ್ರೀ ದಾದಾಪೀರ.ಐ. ಮಾಗೋಡ	4800-7275	5700-00
10	ಕಾವಲುಗಾರ-1	ಶ್ರೀ ದಾವಲಸಾ.ಐ. ತಳಕಲ್ಲ	4800-7275	6250-00
11	ಗ್ಯಾಂಗಮನ್-3	1)ಶ್ರೀ ನಾಗಪ್ಪ.ಟಿ. ಸಣ್ಣಿಂಗಮ್ಮನವರ	4800-7275	6950-00
		2) ಶ್ರೀ ಧರ್ಮಪ್ಪ.ಸಿ. ಮಾಕನೂರ	4800-7275	6950-00
		3) ಶ್ರೀ ಮಂಜಪ್ಪ.ಬಿ. ತಿಪ್ಪಣ್ಣನವರ	4800-7275	6000-00

ಕೈಪಿಡಿ-11

ಇಲಾಖೆಯಲ್ಲಿ ಸಹಾಯಧನ ನೀಡುವ ಕಾರ್ಯಕ್ರಮಗಳ ನಿರ್ವಹಣಾ ವಿವರ ಮತ್ತು ಅದಕ್ಕೆ ಒದಗಿಸಲಾದ ಅನುದಾನ ಮತ್ತು ಫಲಾನುಭವಿಗಳ ವಿವರಗಳು.

ಸಹಾಯಧನ ನೀಡುವ ಕಾರ್ಯಕ್ರಮಗಳು ಇಲ್ಲ.

ಕೈಪಿಡಿ-12

ಇಲಾಖೆಯಲ್ಲಿ ಸಾರ್ವಜನಿಕರಿಗೆ ಮಾಹಿತಿ ಪಡೆಯಲು ಲಭ್ಯವಿರುವ ಸವಲತ್ತುಗಳು ಹಾಗೂ ಗ್ರಂಥಾಲಯ ಅಥವಾ ವಾಚನಾಲಯಗಳು ಇದ್ದಲ್ಲಿ ಅದರ ವಿವರ.

ಸಾರ್ವಜನಿಕರು ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಪ-ವಿಭಾಗ, ಹಿರೇಕೆರೂರ ಇವರ ವ್ಯಾಪ್ತಿಯಲ್ಲಿ ಲಭ್ಯವಿರುವ ಸವಲತ್ತುಗಳನ್ನು ಪಡೆಯಲು ಶ್ರೀ ಗಂಗಾಧರ ಪಟೇಲ್ ಪ್ರ.ದ.ಸಹಾಯಕ ಇವರಿಗೆ ಅರ್ಜಿ ನೀಡುವುದು ಅಥವಾ ಸಂಪರ್ಕಿಸುವುದು.

ಕಛೇರಿಯ ಸಮಯದ ವೇಳೆಯಲ್ಲಿ ಮೇಲ್ಕಂಡ ಅಧಿಕಾರಿಗಳನ್ನು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ:08376-282302 ಸಾರ್ವಜನಿಕರಿಗೆ ಬಳಕೆಗೆ ವಾಚನಾಲಯ ಲಭ್ಯವಿರುವುದಿಲ್ಲ.

ಕೈಪಿಡಿ-13

ಇಲಾಖೆಯಲ್ಲಿರುವ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮ ಮತ್ತು ವಿವರಗಳು, ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು ಪದನಾಮ

ಸಾರ್ವಜನಿಕರು ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಪ-ವಿಭಾಗ, ಹಿರೇಕೆರೂರ ಇವರ ವ್ಯಾಪ್ತಿಯಲ್ಲಿ ಲಭ್ಯವಿರುವ ಸವಲತ್ತುಗಳನ್ನು ಪಡೆಯಲು ಶ್ರೀ ಎಂ.ಬಿ. ತುರಮರಿ ಇವರಿಗೆ ಅರ್ಜಿ ನೀಡುವುದು ಅಥವಾ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಅ. ನಂ.	ಕಛೇರಿ ಮತ್ತು ಪೂರ್ಣ ವಿಳಾಸ	ಸಾರ್ವಜನಿಕ ಮಾಹಿತಿ ನೀಡುವ ಅಧಿಕಾರಿ ಸೆಕ್ಷನ್ 5(1)	ಸಾರ್ವಜನಿಕ ಮಾಹಿತಿ ನೀಡುವ ಅಧಿಕಾರಿ ಸೆಕ್ಷನ್ 5(2)	ಮೇಲ್ಮನವಿ ಪ್ರಾಧಿಕಾರ ಅಧಿಕಾರಿಗಳು ಸೆಕ್ಷನ್ 19(1)
1	ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಪ-ವಿಭಾಗ, ಹಿರೇಕೆರೂರ	ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಪ-ವಿಭಾಗ, ಹಿರೇಕೆರೂರ	ಸಹಾಯಕ ಇಂಜನೀಯರ, (ಸೇವೆಯಲ್ಲಿ ಹಿರಿಯರು) ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪ-ವಿಭಾಗ, ಹಿರೇಕೆರೂರ	ಕಾರ್ಯನಿರ್ವಾಹಕ ಇಂಜನೀಯರ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ಹಾವೇರಿ

ಕೈಪಿಡಿ-14

ಇತರೆ ವಿವರಗಳು

ಏನೂ ಇರುವುದಿಲ್ಲ.

ಮಾಹಿತಿಯನ್ನು ನಿಯಮಗಳಡಿ ಪರಿಶೀಲಿಸಿ ವರದಿಯನ್ನು ತಯಾರಿಸಿ ಸಲ್ಲಿಸಲಾಗಿದೆ.

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ,
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ, ಉಪ-ವಿಭಾಗ, ಹಿರೇಕೆರೂರ.

ಪಿ.ಆರ್.262

ಅಧಿಕಾರಿಯುತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಇವರ ನ್ಯಾಯಾಲಯದಲ್ಲಿ

ಉಪಸ್ಥಿತರು

ಕೆ.ಸಿ. ಹರಿದಾಸ್

ಅಧಿಕಾರಿಯುತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,

ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.

ಡಿ.ಟಿ.ಸಿ.ಆರ್.ನಂ.81/2009-10, ದಿನಾಂಕ:3ನೇ ಫೆಬ್ರವರಿ, 2010

ಫಿರ್ಯಾದುದಾರರು	**ಆಪಾದಿತರು**
ಪೊಲೀಸ್ ಉಪ ನಿರೀಕ್ಷಕರು, ಲಕ್ಕವಳ್ಳಿ ಠಾಣೆ.	ವೇಲು ಯಾನೆ ಜಯಕುಮಾರ ಬಿನ್ ನಟರಾಜು ಮತ್ತು ಇತರರು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:27.07.2007ರಂದು ಪೊಲೀಸ್ ಉಪ ನಿರೀಕ್ಷಕರು, ಲಕ್ಕವಳ್ಳಿ ಠಾಣೆ ಇವರು ಸಿಬ್ಬಂದಿ ಹಾಗೂ ಪಂಚರುಗಳೊಂದಿಗೆ ಅಕ್ರಮ ಸಾರಾಯಿ ಮತ್ತು ಸೇಂದಿ ಮಾರಾಟ ಮಾಡುವವರ ಪತ್ತೆ ಕಾರ್ಯದ ಮೇರೆಗೆ ಕರಕುಚ್ಚಿ, ಹುರುಳಿಬೋರೆ ಗ್ರಾಮಗಳಲ್ಲಿ ಗಸ್ತು ಮಾಡುತ್ತಾ, ಲಕ್ಕವಳ್ಳಿ ಹೋಬಳಿ ಹುರುಳಿಬೋರೆ ಗೊಂದಿ ಚಾನಲ್ ಹತ್ತಿರ ಹೋಗುತ್ತಿದ್ದಾಗ ಹುರುಳಿಬೋರೆ ಕಡೆಯಿಂದ ಒಂದು ಟಿ.ವಿ.ಎಸ್. ಬೈಕ್‌ನಲ್ಲಿ ಇಬ್ಬರು ಆಸಾಮಿಗಳು ಒಂದು ಬಿಳಿಯ ಪ್ಲಾಸ್ಟಿಕ್ ಕ್ಯಾನ್ ಇಟ್ಟುಕೊಂಡು ಬರುತ್ತಿದ್ದನ್ನು ನೋಡಿ, ತಡೆದು ನಿಲ್ಲಿಸಿ ತಪಾಸಣೆ ಮಾಡಲಾಗಿ, ಸೇಂದಿ ಇದ್ದುದು ಕಂಡುಬಂದಿದ್ದು, ಸಾಗಾಣಿಕೆಗೆ ಸಂಬಂಧಿಸಿದಂತೆ ರಹದಾರಿ ಪತ್ರಗಳನ್ನು ಕೇಳಲಾಗಿ, ಯಾವುದೇ ಅಧಿಕೃತ ರಹದಾರಿ ಪತ್ರ ಅಥವಾ ದಾಖಲಾತಿ ಪತ್ರಗಳನ್ನು ಹಾಜರುಪಡಿಸದೇ ಇದ್ದುದರಿಂದ ಅಕ್ರಮವಾದುದೆಂದು ದೃಢಪಡಿಸಿಕೊಂಡು, ಆಸಾಮಿಗಳ ಹೆಸರು ಮತ್ತು ವಿಳಾಸ ಕೇಳಲಾಗಿ ಚಾಲಕ ವೇಲು ಯಾನೆ ಜಯಕುಮಾರ ಬಿನ್ ನಟರಾಜು ಮತ್ತು ಇನ್ನೊಬ್ಬ ರಂಗ ಬಿನ್ ಕುಂಟ್ಟಸಿದ್ದಣ್ಣ, ಹುರುಳಿಬೋರೆ ಗ್ರಾಮ ಎಂದು ತಿಳಿಸಿದ್ದು, ಸ್ಥಳದಲ್ಲಿ ಪಂಚರ ಸಮಕ್ಷಮ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ, ದೊರೆತ ಸೇಂದಿ ಮತ್ತು ವಾಹನ ಸಂಖ್ಯೆ: ಕೆಎ-16-ಜೆ-5571 (ಟಿ.ವಿ.ಎಸ್. ಹೆವಿಡ್ಯೂಟಿ) ಅನ್ನು ಸರ್ಕಾರದ ವಶಕ್ಕೆ ಅಮಾನತ್ತುಪಡಿಸಿಕೊಂಡು ಆರೋಪಿಗಳನ್ನು ದಸ್ತಗಿರಿ ಮಾಡಿ ಪ್ರ.ಮಾ.ವ. ನಂ.46/2007ರಲ್ಲಿ ಪ್ರಕರಣವನ್ನು ದಾಖಲಿಸಿ ವಶಪಡಿಸಿಕೊಂಡ ವಾಹನವನ್ನು ಮುಂದಿನ ವಿಲೇವಾರಿ ಕುರಿತು ಈ ಪ್ರಾಧಿಕಾರದ ಅನುಮತಿ ಪಡೆದು ಅಬಕಾರಿ ನಿರೀಕ್ಷಕರು, ತರೀಕೆರೆ ವಲಯ ಇವರಿಗೆ ಹಸ್ತಾಂತರಿಸಿರುತ್ತಾರೆ.

ವಶಪಡಿಸಿಕೊಂಡ ವಾಹನಕ್ಕೆ ಸಂಬಂಧಿಸಿದಂತೆ ಈ ಪ್ರಾಧಿಕಾರವು ಮುಟ್ಟುಗೋಲಿನ ನಡವಳಿಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) ಅಡಿಯಲ್ಲಿ ಪ್ರಾರಂಭಿಸಿ, ವಾಹನದ ಮಾಲೀಕತ್ವದ ಹಾಗೂ ಮೌಲ್ಯದ ವಿವರಗಳನ್ನು ನೀಡುವಂತೆ ಕೋರಿ ಕ್ರಮವಾಗಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಚಿತ್ರದುರ್ಗ ಮತ್ತು ಚಿಕ್ಕಮಗಳೂರು ಇವರಿಗೆ ಪತ್ರ ಬರೆಯಲಾಗಿತ್ತು.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಚಿತ್ರದುರ್ಗ ಇವರಿಂದ ಪಡೆಯಲಾದ "ಬಿ" ವರದಿಯ ಪ್ರಕಾರ ಶ್ರೀ ಕೆ.ವಿ. ರುದ್ರಮುನಿ ಬಿನ್ ಬಿ. ವೀರಭದ್ರಯ್ಯ, ರಾಮ್‌ಗಿರಿ, ಹೊಳಲ್ಕೆರೆ, ತಾ: ಇವರು ವಾಹನದ ಮಾಲೀಕರೆಂದು ತಿಳಿದು ಬಂದಿದ್ದು, ವಾಹನದ ಮಾಲೀಕರಿಗೆ ನೊಂದಾಯಿತ ಅಂಚೆ ಮೂಲಕ ಪ್ರಕರಣದಲ್ಲಿ ಜಪ್ತುಪಡಿಸಿದ ವಾಹನವನ್ನು ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂದು ಕಾರಣ ಕೇಳಿ ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ) ಅಡಿಯಲ್ಲಿ ನೋಟಿಸ್ ಜಾರಿ ಮಾಡಲು ಕ್ರಮ ಕೈಗೊಂಡಿದ್ದು, ನೋಟಿಸ್ ದಿನಾಂಕ:16.01.2010 ರಂದು ಜಾರಿಯಾದ ಬಗ್ಗೆ ಸ್ವೀಕೃತಿ ಈ ಪ್ರಾಧಿಕಾರಕ್ಕೆ ಮರಳಿ ಬಂದಿರುತ್ತದೆ.

ವಾಹನದ ಮಾಲೀಕರು ಈ ಪ್ರಾಧಿಕಾರದಿಂದ ನೀಡಲಾದ ಕಲಂ 43(ಬಿ) ನೋಟೀಸ್‌ನ್ನು ಸ್ವೀಕರಿಸಿಯೂ ಸಹ ಅದಕ್ಕೆ ಪೂರಕವಾಗಿ ಆಪಾದನೆಯನ್ನು ಅಲ್ಲಗಳೆಯಲು ಇದುವರೆವಿಗೂ ಯಾವುದೇ ದಾಖಲೆಗಳ ಅಥವಾ ಸಾಕ್ಷ್ಯಗಳ ಮೂಲಕ ಕೃತ್ಯದಲ್ಲಿ ಭಾಗಿಯಾಗಿಲ್ಲವೆಂದು, ತಾವಾಗಲೀ ಅಥವಾ ತಮ್ಮ ನ್ಯಾಯವಾದಿಗಳ ಮುಖಾಂತರವಾಗಲೀ ಹಾಜರಾಗದೇ ಇರುವುದರಿಂದ ಇವರು ಮೊಕದ್ದಮೆಯ ಕೃತ್ಯದಲ್ಲಿ ಶಾಮೀಲಾಗಿರುವುದು ಸ್ಪಷ್ಟವಾಗಿರುವುದು, ಈ ಕೃತ್ಯಕ್ಕೆ ಸೇಂದಿಯನ್ನು ಹಾಗೂ ವಾಹನವನ್ನು ಬಳಸಲಾಗಿಲ್ಲವೆಂಬ ಬಗ್ಗೆ ನಿರೂಪಿಸದೇ ಇರುವ ಅಂಶಗಳು, ಸಾಕ್ಷ್ಯಗಳು ಹಾಗೂ ಪ್ರಾಧಿಕಾರದ ಮುಂದೆ ಇರುವ ದಾಖಲೆಗಳ ಮೂಲಕ ಸಹಾಯಕ ಅಭಿಯೋಗ ನಿರ್ದೇಶಕರು, ಪ್ರಾಧಿಕಾರದ ಮುಂದೆ ವಾದ ಮಂಡಿಸಿ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವೆಂದು ಅಭಿಪ್ರಾಯಪಟ್ಟಿರುತ್ತಾರೆ.

ಲಭ್ಯವಿದ್ದ ದಾಖಲೆಗಳು ಹಾಗೂ ಆಧಾರಗಳನ್ನು ಗಮನಿಸಿದಾಗ ಸಹಾಯಕ ಅಭಿಯೋಗ ನಿರ್ದೇಶಕರ ವಾದವನ್ನು ಪುರಸ್ಕರಿಸಲು ಯೋಗ್ಯವೆಂದು ಪ್ರಾಧಿಕಾರಕ್ಕೆ ಮನವರಿಕೆಯಾಗುತ್ತದೆ. ಕಾರಣ, ವಾಹನದ ಮಾಲೀಕರು ಪ್ರಾಸಿಕ್ಯೂಷನ್ ಮಾಡಿರುವ ಆರೋಪಗಳನ್ನು ಅಲ್ಲಗಳೆಯಲು ಸಂಪೂರ್ಣ ನಿರ್ಲಕ್ಷರಾಗಿರುವುದರಿಂದ ಹಾಗೂ ಕಲಂ 43ರ ಅಡಿಯಲ್ಲಿ, ಪ್ರಕರಣವನ್ನು ಪತ್ತೆಹಚ್ಚಿದ ಒಂದು ತಿಂಗಳೊಳಗಾಗಿ ವಶಪಡಿಸಿಕೊಂಡ ಸ್ವತ್ತುಗಳು ಕರ್ನಾಟಕ ಅಬಕಾರಿ ಕಾಯ್ದೆ, 1965ರ ಕಲಂ 43ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಬಾದ್ಯವಾಗಿದ್ದಲ್ಲಿ, ಯಾರೊಬ್ಬರು ಸದರಿ ಸ್ವತ್ತುಗಳು ಕಾನೂನು ಬದ್ಧವಾಗಿವೆ ಎಂಬ ಸಾಕ್ಷ್ಯಧಾರಗಳನ್ನು ಹಾಜರುಪಡಿಸದೇ ಇದ್ದಲ್ಲಿ ಅಂತಹವುಗಳನ್ನು ಕಲಂ 43(ಸಿ) ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿದ್ದು, ಮೊಕದ್ದಮೆಯ ಶೀಘ್ರ ವಿಲೇವಾರಿ ದೃಷ್ಟಿ ಹಾಗೂ ರಾಜಸ್ವದ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಈ ಮೊಕದ್ದಮೆಯನ್ನು ಕರ್ನಾಟಕ ಅಬಕಾರಿ ಕಾಯ್ದೆ, 1965ರ ಕಲಂ 43(ಸಿ) ಅಡಿಯಲ್ಲಿ ನಡವಳಿಗಳನ್ನು ಜರುಗಿಸಿ ಇತ್ಯರ್ಥಗೊಳಿಸುವುದು ಸಮಂಜಸವೆಂದು ಮನವರಿಕೆಯಾದ ಕಾರಣ ಈ ಕೆಳಕಂಡ ಆದೇಶ.

ಆದೇಶ

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ) ಅಡಿಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಕಲಂ 43(ಎ) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪೊಲೀಸ್ ಉಪ ನಿರೀಕ್ಷಕರು, ಲಕ್ಕವಳ್ಳಿ ಠಾಣೆ ಇವರ ಕ್ರೈಂ ನಂ.46/2007ರಲ್ಲಿ ದಿನಾಂಕ:27.07.2007ರಂದು ವಶಪಡಿಸಿಕೊಳ್ಳಲಾದ ವಾಹನ ಸಂಖ್ಯೆ:ಕೆಎ-16-ಜೆ-5571 (ಟಿ.ವಿ.ಎಸ್. ಹೆವಿಡ್ಯೂಟಿ) ಮೋಟಾರ್ ಬೈಕನ್ನು ಕರ್ನಾಟಕ ಅಬಕಾರಿ ಕಾಯ್ದೆ, 1965ರ ಕಲಂ 43(ಸಿ) ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿರುತ್ತೇನೆ.

(ಈ ಆದೇಶವನ್ನು ಇಂದು ಅಂದರೆ 3ನೇ ಫೆಬ್ರವರಿ 2010ರಂದು ಶೀಘ್ರಲಿಪಿಗಾರರಿಗೆ ಉಖ್ತಲೇಖನ ಕೊಟ್ಟು ಗಣಕ ಯಂತ್ರದಲ್ಲಿ ಬೆರಳಚ್ಚಿಸಿದ ನಂತರ ತಪ್ಪುಗಳನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಅಧಿಕಾರಯುತ ಅಧಿಕಾರಿ ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,
ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.

ಪಿ.ಆರ್.325

ಅಧಿಕಾರಿಯುತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನ್ಯಾಯಾಲಯ,
ಭದ್ರಾವತಿ ವಿಭಾಗ, ಭದ್ರಾವತಿ

ಸಂಖ್ಯೆ: ಎ3-ಎಫ್.ಓ.ಸಿ.ಸಿ.ಓ.ಎನ್-ಸಿಆರ್-4/2009-10, ದಿನಾಂಕ:24ನೇ ಮಾರ್ಚ್, 2010

ವಿಷಯ: ಅಕ್ರಮ ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆ ಸಂಬಂಧ ಮಾರುತಿ ಓಮಿನಿ ವ್ಯಾನ್ ಸಂಖ್ಯೆ: ಕೆಎ-04-ಎನ್-2896 ನ್ನು ವಶಪಡಿಸಿಕೊಂಡ ಬಗ್ಗೆ.

ಉಲ್ಲೇಖ:1) ವಲಯ ಅರಣ್ಯಾಧಿಕಾರಿ, ತರೀಕೆರೆ ವಲಯ, ತರೀಕೆರೆ ರವರ ಪ್ರಥಮ ಮಾಹಿತಿ ವರದಿ ಸಂಖ್ಯೆ: 037096 ದಿನಾಂಕ:30.05.2009.

2) ವಲಯ ಅರಣ್ಯಾಧಿಕಾರಿ, ತರೀಕೆರೆ ವಲಯ, ತರೀಕೆರೆ ಇವರ ಪತ್ರ ಸಂಖ್ಯೆ: 140/2009-10 ದಿನಾಂಕ:01.06.2009.

3) ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಂಗಳೂರು ಇವರಿಗೆ ಬರೆದ ಪತ್ರದ ಸಮ ಸಂಖ್ಯೆ ದಿನಾಂಕ:15.06.2009.

4) ಅಧಿಕಾರಿಯುತ ಅಧಿಕಾರಿಗಳು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಭದ್ರಾವತಿ ವಿಭಾಗ, ಭದ್ರಾವತಿ ಇವರ ನ್ಯಾಯಾಲಯದ ಪ್ರಕಟಣೆ ಸಮ ಸಂಖ್ಯೆ ದಿನಾಂಕ:08.06.2009ನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ 02.07.2009 ರಂದು ಪ್ರಕಟಿಸಲಾಗಿದೆ.

ಪ್ರಕಟಣೆಯ ಹಿನ್ನೆಲೆ:

ದಿನಾಂಕ:30.05.2009ರಂದು ತರೀಕೆರೆ ವಲಯದ ಲಿಂಗದಹಳ್ಳಿ ಶಾಖೆಯ ವನಪಾಲಕರು ಹಾಗೂ ಸಿಬ್ಬಂದಿಯವರು ಲಿಂಗದಹಳ್ಳಿ ಗ್ರಾಮದ ಅರಣ್ಯ ತನಿಖಾ ಠಾಣೆಯ ಹತ್ತಿರ (ಹಿಂದಿನ) ತುರ್ತು ವರ್ತಮಾನದ ಮೇರೆಗೆ ಕಾಯುತ್ತಿರುವಾಗ ಉಡೇವಾ ಗ್ರಾಮದ ಕಡೆಯಿಂದ ಒಂದು ಮಾರುತಿ ಓಮಿನಿ ವ್ಯಾನ್ ಸಂಖ್ಯೆ: ಕೆಎ–04–ಎನ್–2896 ರಲ್ಲಿ ಬೀಟೆ ಜಾತಿಯ ಸೈಜುಗಳು 5=0.354 ಎಂ3 ನ್ನು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದನ್ನು ಪತ್ತೆ ಹಚ್ಚಿ ವಾಹನವನ್ನು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದು ಕಂಡುಬಂದಿರುತ್ತದೆ. ಸದರಿ ವಾಹನವನ್ನು ಹಾಗೂ ಅರಣ್ಯ ಉತ್ಪನ್ನವನ್ನು ವಶಪಡಿಸಿಕೊಂಡು ಸ್ಥಳದಲ್ಲಿ ಪಂಚನಾಮೆ ಜರುಗಿಸಿ ಅರಣ್ಯ ಮೊಕದ್ದಮೆ ಸಂಖ್ಯೆ:30/2009–10 ನ್ನು ದಾಖಲು ಮಾಡಿರುತ್ತಾರೆ. ಸದರಿ ವಾಹನವನ್ನು ಬಿಡುಗಡೆಗೆ ಕೋರಿ ಈ ಕಛೇರಿ ನ್ಯಾಯಾಲಯಕ್ಕೆ ಯಾರು ಅರ್ಜಿ ಸಲ್ಲಿಸಿರುವುದಿಲ್ಲ. ಈ ಬಗ್ಗೆ ಉಲ್ಲೇಖ ಪತ್ರ 3 ರಲ್ಲಿ ವಾಹನದ ಮಾಲೀಕರ ವಿಳಾಸ ಹಾಗೂ ವಾಹನದ ವಿವರವುಳ್ಳ 'ಬಿ' ವಹಿಯನ್ನು ಒಪ್ಪಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಂಗಳೂರು ಇವರಿಗೆ ಪತ್ರ ಬರೆದಿರುತ್ತದೆ. ವಿವರವನ್ನು ಒಪ್ಪಿಸಿರುವುದಿಲ್ಲ. ಸದರಿ ವಾಹನಕ್ಕೆ ಸಂಬಂಧಿಸಿದ ವಾರಸುದಾರರು ಯಾರು ಇಲ್ಲದೇ ಇದ್ದುದರಿಂದ ಕರ್ನಾಟಕ ಅರಣ್ಯ ಕಾಯಿದೆ 71(ಎ) ಪ್ರಕಾರ 30 ದಿನಗಳ ಕಾಲಾವಕಾಶ ನೀಡಿ ಯಾರಾದರೂ ವಾರಸುದಾರರು ಇದ್ದರೆ ವಾಹನಕ್ಕೆ ಸಂಬಂಧಿಸಿದ ದಾಖಲಾತಿಗಳ ಸಮೇತ ಹಕ್ಕುಬಾದ್ಯತೆಗಳನ್ನು ಈ ಕೆಳಗೆ ಸಹಿ ಮಾಡಿದವರ ಮುಂದೆ ಖುದ್ದಾಗಿಯಾಗಲೀ ಅಥವಾ ನ್ಯಾಯವಾದಿಗಳವರ ಮುಖಾಂತರವಾಗಲೀ ಹಾಜರುಪಡಿಸುವುದಕ್ಕೆ ಹಾಗೂ ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ ಸಂಬಂಧದಲ್ಲಿ ವಾಹನವನ್ನು ಏಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದರ ಬಗ್ಗೆ ತಿಳುವಳಿಕೆ ಪತ್ರವನ್ನು ಕರ್ನಾಟಕ ರಾಜ್ಯ ಪತ್ರ ದಿನಾಂಕ:02.07.2009 ರಂದು ಪ್ರಚಾರ ಪಡಿಸಿ ಪ್ರಕಟಿಸಲಾಗಿದೆ.

ಪ್ರಕಟಣೆಯಂತೆ 30 ದಿನಗಳು ದಿನಾಂಕ:01.08.2009ಕ್ಕೆ ಮುಕ್ತಾಯಗೊಂಡಿದ್ದು, ವಾಹನದ ಬಗ್ಗೆ ಯಾವ ವಾರಸುದಾರರೂ ತಮ್ಮ ಮಾಲೀಕತ್ವವನ್ನು ದೃಢಪಡಿಸಿ ವಾಹನವನ್ನು ತಮ್ಮ ವಶಕ್ಕೆ ಕೋರಿಕೊಳ್ಳದೆ ಇದ್ದುದರಿಂದ ಸದರಿ ವಾಹನವನ್ನು ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆಯಲ್ಲಿ ಉಪಯೋಗಿಸಿರುವುದು ಸ್ಪಷ್ಟವಾಗಿರುತ್ತದೆ.

ಈ ಮೊಕದ್ದಮೆಯಲ್ಲಿ ಸಾಕಷ್ಟು ಕಾಲಾವಕಾಶವನ್ನು ಕೊಟ್ಟರೂ ಸಹ ಮಾಲೀಕರು ಅಧಿಕಾರಿಯುತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಭದ್ರಾವತಿ ವಿಭಾಗ, ಭದ್ರಾವತಿ ಇವರ ನ್ಯಾಯಾಲಯದ ಮುಂದೆ ಬಂದು ವಾಹನದ ಮಾಲೀಕತ್ವದ ಬಗ್ಗೆ ಮೂಲ ದಾಖಲಾತಿಗಳನ್ನು ಹಾಜರುಪಡಿಸಿ, ತಾವು ತಪ್ಪಿತಸ್ಥರಲ್ಲವೆಂಬುದನ್ನು ಸಾಬೀತು ಪಡಿಸಿರುವುದಿಲ್ಲವಾದ ಕಾರಣ ಮೇಲ್ಕಂಡ ವಾಹನವನ್ನು ಕರ್ನಾಟಕ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಈ ಕೆಳಕಂಡಂತೆ ಆದೇಶ ಹೊರಡಿಸಿರುತ್ತೇನೆ.

ಆದೇಶ

ಮೇಲ್ಕಂಡ ವಿದ್ಯಾಮಾನಗಳನುಸಾರವಾಗಿ ಶ್ರೀ ಎಸ್.ಎಸ್. ಲಿಂಗರಾಜ, ಭಾ.ಆ.ಸೇ., ಅಧಿಕಾರಿಯುತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ ವಿಭಾಗ, ಭದ್ರಾವತಿ ಆದ ನಾನು ಅರಣ್ಯ ಕಾಯಿದೆ 1963 ನಿಯಮ 71ಎ(2)ರ ತಿದ್ದುಪಡಿ ಪ್ರಕಾರ ಒಂದು ಮಾರುತಿ ಓಮಿನಿ ವ್ಯಾನ್ ಸಂಖ್ಯೆ: ಕೆಎ–04–ಎನ್–2896 (ಛಾಸಿ ನಂ.916619, ಯಂತ್ರದ ಸಂಖ್ಯೆ:776076) ಹಾಗೂ ವಾಹನದಲ್ಲಿದ್ದ ಬೀಟೆ ಜಾತಿಯ ಸೈಜುಗಳು 5=0.354 ಎಂ3ನ್ನು ಸರ್ಕಾರದ ಪರ ಮುಟ್ಟುಗೋಲು ಮಾಡಿ ಆದೇಶಿಸಲಾಗಿದೆ.

ಈ ಆದೇಶವನ್ನು ದಿನಾಂಕ:24.03.2010 ರಂದು ಈ ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ಹೊರಡಿಸಿರುತ್ತೇನೆ.

ಎಸ್.ಎಸ್. ಲಿಂಗರಾಜ
ಅಧಿಕಾರಿಯುತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಭದ್ರಾವತಿ ವಿಭಾಗ, ಭದ್ರಾವತಿ.

ಪಿ.ಆರ್.544

ಅಧಿಕಾರಿಯುತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನ್ಯಾಯಾಲಯ,
ಭದ್ರಾವತಿ ವಿಭಾಗ, ಭದ್ರಾವತಿ

ಸಂಖ್ಯೆ: ಎ3-ಎಫ್.ಓ.ಸಿ.ಸಿ.ಓ.ಎನ್-ಸಿಆರ್-10/2008-09, ದಿನಾಂಕ:24ನೇ ಮಾರ್ಚ್, 2010

ವಿಷಯ: ಅಕ್ರಮ ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆ ಸಂಬಂಧ ಮೋಟಾರ್ ಬೈಕ್ ಸುಜುಕಿ ಮ್ಯಾಕ್ಸ್ ಸಂಖ್ಯೆ: ಕೆಎ-14-ಜೆ-3577 ನ್ನು ವಶಪಡಿಸಿಕೊಂಡ ಬಗ್ಗೆ.

ಉಲ್ಲೇಖ:1) ವಲಯ ಅರಣ್ಯಾಧಿಕಾರಿ, ಅರಣ್ಯ ಸಂಚಾರಿ ದಳ, ಚನ್ನಗಿರಿ ರವರ ಪ್ರಥಮ ಮಾಹಿತಿ ವರದಿ ಸಂಖ್ಯೆ:040161 ದಿನಾಂಕ:09.02.2009.

2) ವಲಯ ಅರಣ್ಯಾಧಿಕಾರಿ, ಉಂಬ್ಳೇಬೈಲು ವಲಯ, ಉಂಬ್ಳೇಬೈಲು ಇವರ ಪತ್ರ ಸಂಖ್ಯೆ:645/2008-09 ದಿನಾಂಕ:09.02.2009.

3) ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಶಿವಮೊಗ್ಗ ಇವರಿಗೆ ಬರೆದ ಪತ್ರದ ಸಮ ಸಂಖ್ಯೆ ದಿನಾಂಕ:16.02.2009.

4) ಅಧಿಕಾರಿಯುತ ಅಧಿಕಾರಿಗಳು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಭದ್ರಾವತಿ ವಿಭಾಗ, ಭದ್ರಾವತಿ ಇವರ ನ್ಯಾಯಾಲಯದ ಪ್ರಕಟಣೆ ಸಮ ಸಂಖ್ಯೆ ದಿನಾಂಕ:16.02.2009ನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ 18.06.2009 ರಂದು ಪ್ರಕಟಿಸಲಾಗಿದೆ.

ಪ್ರಕಟಣೆಯ ಹಿನ್ನೆಲೆ:

ದಿನಾಂಕ:09.02.2009ರಂದು ಉಂಬ್ಳೇಬೈಲು ವಲಯದ ಹಾಲ್‌ಲಕ್ಕವಳ್ಳಿ ಶಾಖೆಯ ವನಪಾಲಕರು ಹಾಗೂ ಸಿಬ್ಬಂದಿಯವರು ವರ್ಗದವರು ಇಲಾಖಾ ಜೀಪಿನಲ್ಲಿ ಗಸ್ತು ಕಾರ್ಯವನ್ನು ನಿರ್ವಹಿಸುತ್ತಿದ್ದಾಗ ಕಡೇಕಲ್ ಹಾಲ್‌ಲಕ್ಕವಳ್ಳಿ ಟಾರ್ ರಸ್ತೆಯಲ್ಲಿ ಮೋಟಾರ್ ಬೈಕ್ ಸುಜುಕಿ ಮ್ಯಾಕ್ಸ್ 100ಆರ್. ಸಂಖ್ಯೆ:ಕೆಎ-14-ಜೆ-3577 ರಲ್ಲಿ ಬೀಟೆ ತುಂಡುಗಳು 1=0.135 ಎಂ3 ಹಾಗೂ ಕೊಯ್ತ ಮಾಡಲು ಉಪಯೋಗಿಸಿದ ಒಂದು ಗರಗಸವನ್ನು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದನ್ನು ಅಪರಾಧಿಯ ಸಮೇತ ಪತ್ತೆ ಹಚ್ಚಿ ವಶಪಡಿಸಿಕೊಂಡು ಸ್ಥಳದಲ್ಲಿ ಪಂಚನಾಮೆ ಜರುಗಿಸಿ ಅರಣ್ಯ ಮೊಕದ್ದಮೆ ಸಂಖ್ಯೆ:78/2008-09ನ್ನು ದಾಖಲು ಮಾಡಿರುತ್ತಾರೆ. ಸದರಿ ವಾಹನವನ್ನು ಬಿಡುಗಡೆಗೆ ಕೋರಿ ಈ ಕಛೇರಿ ನ್ಯಾಯಾಲಯಕ್ಕೆ ಯಾರು ಅರ್ಜಿ ಸಲ್ಲಿಸಿರುವುದಿಲ್ಲ. ಈ ಬಗ್ಗೆ ಉಲ್ಲೇಖ ಪತ್ರ 3ರಲ್ಲಿ ವಾಹನದ ಮಾಲೀಕರ ವಿಳಾಸ ಹಾಗೂ ವಾಹನದ ವಿವರವುಳ್ಳ 'ಬಿ' ವಹಿಯನ್ನು ಒಪ್ಪಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಶಿವಮೊಗ್ಗ ಇವರಿಗೆ ಪತ್ರ ಬರೆದಿರುತ್ತದೆ. ವಿವರವನ್ನು ಒಪ್ಪಿಸಿರುವುದಿಲ್ಲ. ಸದರಿ ವಾಹನಕ್ಕೆ ಸಂಬಂಧಿಸಿದ ವಾರಸುದಾರರು ಯಾರು ಇಲ್ಲದೇ ಇದ್ದುದರಿಂದ ಕರ್ನಾಟಕ ಅರಣ್ಯ ಕಾಯಿದೆ 71(ಎ) ಪ್ರಕಾರ 30 ದಿನಗಳ ಕಾಲಾವಕಾಶ ನೀಡಿ ಯಾರಾದರೂ ವಾರಸುದಾರರು ಇದ್ದರೆ ವಾಹನಕ್ಕೆ ಸಂಬಂಧಿಸಿದ ದಾಖಲಾತಿಗಳ ಸಮೇತ ಹಕ್ಕುಬಾದ್ಯತೆಗಳನ್ನು ಈ ಕೆಳಗೆ ಸಹಿ ಮಾಡಿದವರ ಮುಂದೆ ಖುದ್ದಾಗಿಯಾಗಲೀ ಅಥವಾ ನ್ಯಾಯವಾದಿಗಳವರ ಮುಖಾಂತರವಾಗಲೀ ಹಾಜರುಪಡಿಸುವುದಕ್ಕೆ ಹಾಗೂ ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ ಸಂಬಂಧದಲ್ಲಿ ವಾಹನವನ್ನು ಏಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದರ ಬಗ್ಗೆ ತಿಳುವಳಿಕೆ ಪತ್ರವನ್ನು ಕರ್ನಾಟಕ ರಾಜ್ಯ ಪತ್ರ ದಿನಾಂಕ:18.06.2009 ರಂದು ಪ್ರಚಾರ ಪಡಿಸಿ ಪ್ರಕಟಿಸಲಾಗಿದೆ.

ಪ್ರಕಟಣೆಯಂತೆ 30 ದಿನಗಳು ದಿನಾಂಕ:17.07.2009ಕ್ಕೆ ಮುಕ್ತಾಯಗೊಂಡಿದ್ದು, ವಾಹನದ ಬಗ್ಗೆ ಯಾವ ವಾರಸುದಾರರೂ ತಮ್ಮ ಮಾಲೀಕತ್ವವನ್ನು ದೃಢಪಡಿಸಿ ವಾಹನವನ್ನು ತಮ್ಮ ವಶಕ್ಕೆ ಕೋರಿಕೊಳ್ಳದೆ ಇದ್ದುದರಿಂದ ಸದರಿ ವಾಹನವನ್ನು ಅರಣ್ಯ ಉತ್ಪನ್ನ ಕಳ್ಳ ಸಾಗಾಣಿಕೆಯಲ್ಲಿ ಉಪಯೋಗಿಸಿರುವುದು ಸ್ಪಷ್ಟವಾಗಿರುತ್ತದೆ.

